# ಪುಂಗವ

ರಾಷ್ಟ್ರೀಯ ಜಾಗರಣ ಪತ್ರಿಕೆ


**ಒಂದೊಳ್ಳೆ ಮಾತು...**

ಬಯಸಿದ್ದೆಲ್ಲಾ ಸಿಗುವಂತಿದ್ದರೆ ಬಯಕೆಗೆ ಬೆಲೆ ಇರುತ್ತಿರಲಿಲ್ಲ.
ಅನಿಸಿದ್ದೆಲ್ಲಾ ಹೇಳುವಂತಿದ್ದರೆ ಮೌನಕ್ಕೆ ಅರ್ಥ ಇರುತ್ತಿರಲಿಲ್ಲ.
ತಪ್ಪುಗಳೆ ಆಗದಿದ್ದರೆ ಹೊಸ ಪ್ರಯತ್ನ ಪಡುತ್ತಿರಲಿಲ್ಲ.
ಕಣ್ಣೀರೆ ಬರದಿದ್ದರೆ ನಗುವಿನ ಆನಂದ ತಿಳಿಯುತ್ತಿರಲಿಲ್ಲ.
ಕಷ್ಟಗಳು ಎದುರಾಗದಿದ್ದರೆ
ಜೀವನದ ಮೌಲ್ಯ ಗೊತ್ತಾಗುತ್ತಿರಲಿಲ್ಲ.


ಸಂಪುಟ : 37 ಸಂಚಿಕೆ : 4 ಮನ್ಮಥ–ಕನ್ಯಾ ಕಲಿಯುಗಾಬ್ದ 5117 1–10–2015 ತ್ರೈವಾರ್ಷಿಕ : ರೂ. 150.00 ಬಿಡಿ ಪ್ರತಿ : ರೂ. 3.00 ಪುಟಗಳು : 4


# 2011ರ ಜನಗಣತಿ : ಹಿಂದು ಜನಸಂಖ್ಯೆಯ ಶೇಕಡಾ ಪ್ರಮಾಣದಲ್ಲಿ ಕುಸಿತ

**2011ರ ಜನಗಣತಿಯ ಅಂಕಿಅಂಶಗಳು ಕಳೆದ ತಿಂಗಳು ಬಿಡುಗಡೆಯಾಗಿದ್ದು ವಿವಿಧ ಮತಗಳ ಜನಸಂಖ್ಯೆಯ ವಿವರಗಳು ಈಗ ಲಭ್ಯ. ಭಾರತದ ಒಟ್ಟು ಜನಸಂಖ್ಯೆ 121.05 ಕೋಟಿ. 2001ಕ್ಕೆ ಹೋಲಿಸಿದರೆ, ನಮ್ಮ ಜನಸಂಖ್ಯೆಯಲ್ಲಿ ಶೇ. 17.7 ಹೆಚ್ಚಳವಾಗಿದೆ. ಇದರಲ್ಲಿ ಹಿಂದುಗಳು 96.63 ಕೋಟಿ, ಮುಸ್ಲಿಮರು 17.22 ಕೋಟಿ, ಕ್ರಿಶ್ಚಿಯನ್ನರು 2.78 ಕೋಟಿ, ಸಿಖ್ಖರು 2.08 ಕೋಟಿ, ಬೌದ್ಧರು 0.84 ಕೋಟಿ, ಜೈನರು 0.45 ಕೋಟಿ ಇದ್ದಾರೆ ಎಂದು ವರದಿ ತಿಳಿಸುತ್ತದೆ.**

## ಸುದ್ದಿ ವಿಶ್ಲೇಷಣೆ

- ಕಳೆದ ಆರು ದಶಕಗಳಿಂದಲೂ ಹಿಂದುಗಳ ಜನಸಂಖ್ಯೆಯ ಶೇಕಡಾ ಪ್ರಮಾಣದಲ್ಲಿ ಇಳಿಕೆಯಾಗುತ್ತಲೇ ಇದೆ. ಪ್ರತಿ ಹಿಂದು ಕುಟುಂಬದಲ್ಲಿ 3–4 ಇರುತ್ತಿದ್ದ ಮಕ್ಕಳ ಸಂಖ್ಯೆ ಈಗೆಲ್ಲಾ 1–2ಕ್ಕೆ ಬಂದಿರುವುದು ಮತ್ತು ಮುಸ್ಲಿಮರಲ್ಲಿ ಈಗಲೂ 3–4 ಮಕ್ಕಳಿರುವುದು ಒಂದು ಕಾರಣ. ಬಾಂಗ್ಲಾದೇಶೀ ಮುಸ್ಲಿಮರು ನಮ್ಮ ದೇಶದೊಳಗೆ ಅಕ್ರಮವಾಗಿ ನುಸುಳಿ ಮತದಾರರ ಗುರುತಿನ ಚೀಟಿ, ನಾಗರಿಕತ್ವ ಮೊದಲಾದವನ್ನು ಪಡೆದಿರುವುದೂ ಇನ್ನೊಂದು ಕಾರಣ.
- 1881ರಿಂದ ನಡೆದಿರುವ ಜನಗಣತಿಗಳ ಆಧಾರದ ಮೇಲೆ ಅವಿಭಜಿತ ಭಾರತದ ಒಟ್ಟು ಜನಸಂಖ್ಯೆಯಲ್ಲಿ ಹಿಂದು ಮುಸ್ಲಿಮರ ಶೇಕಡಾವಾರು ಸಂಖ್ಯೆ ಕೆಳಕಂಡಂತೆ ಇತ್ತು.

| | 1881 | 1891 | 1901 | 1911 | 1921 | 1931 | 1941 |
|---|---|---|---|---|---|---|---|
| ಹಿಂದು | 75.09 | 74.24 | 72.87 | 71.68 | 70.73 | 70.67 | 69.46 |
| ಮುಸ್ಲಿಂ | 19.97 | 20.41 | 21.88 | 22.39 | 23.23 | 23.49 | 24.28 |

- ಅಂದರೆ ಸ್ವಾತಂತ್ರ್ಯಪೂರ್ವದ ಅವಿಭಜಿತ ಭಾರತದಲ್ಲಿ 60 ವರ್ಷಗಳಲ್ಲಿ ಹಿಂದುಗಳ ಜನಸಂಖ್ಯೆ 75% ರಿಂದ 69.5% ಕ್ಕೆ ಇಳಿದು ಮುಸಲ್ಮಾನರ ಸಂಖ್ಯೆ 20% ರಿಂದ 24.3% ಕ್ಕೆ ಏರಿತು. ಇದರ ಪರಿಣಾಮವೇ ಭಾರತ (ಹಿಂದುಗಳಿಗಾಗಿ), ಪಾಕಿಸ್ತಾನ (ಮುಸ್ಲಿಮರಿಗಾಗಿ, ಈಗಿನ ಬಾಂಗ್ಲಾದೇಶವೂ ಸೇರಿದಂತೆ) ಎಂದು ದೇಶ ವಿಭಜನೆಯಾಗಿದ್ದು.
- ಸ್ವತಂತ್ರ ಭಾರತದಲ್ಲಿನ (ವಿಭಜನೆಯ ಬಳಿಕ) ಜನಗಣತಿಯಂತೆ ಒಟ್ಟು ಜನಸಂಖ್ಯೆಯಲ್ಲಿ ಶೇಕಡಾವಾರು ಜನಸಂಖ್ಯೆ ಹೀಗಿದೆ:

| | 1951 | 1961 | 1971 | 1981 | 1991 | 2001 | 2011 |
|---|---|---|---|---|---|---|---|
| ಹಿಂದು | 84.1 | 83.45 | 82.73 | 82.3 | 81.53 | 80.46 | 79.8 |
| ಮುಸ್ಲಿಂ | 9.80 | 10.69 | 11.21 | 11.75 | 12.61 | 13.43 | 14.23 |
| ಕ್ರಿಶ್ಚಿಯನ್ | 2.30 | 2.44 | 2.60 | 2.44 | 2.32 | 2.34 | 2.30 |


- 60 ವರ್ಷಗಳಲ್ಲಿ ಹಿಂದುಗಳ ಸಂಖ್ಯೆ 84.1% ರಿಂದ 79.8% ಕ್ಕೆ ಇಳಿದು, ಮುಸಲ್ಮಾನರ ಸಂಖ್ಯೆ 9.8% ರಿಂದ 14.2% ಕ್ಕೆ ಏರಿತು.
- ಅನೇಕರು ಕ್ರೈಸ್ತರಾಗಿ ಮತಾಂತರ ಹೊಂದಿದ್ದರೂ ಸರಕಾರ ನೀಡುವ ಸೌಲಭ್ಯಗಳನ್ನು ಪಡೆಯಲು ಮಾತ್ರ 'ಹಿಂದು' ಎಂದೇ ದಾಖಲಿಸುತ್ತಾರೆ. ಅಂತಹವರ ಸಂಖ್ಯೆ ಸುಮಾರು 4 ಕೋಟಿಯಷ್ಟಿದೆ ಎಂದು ಕ್ರಿಶ್ಚಿಯನ್ ಸಂಸ್ಥೆಗಳೇ ಅಂದಾಜು ಮಾಡಿವೆ. ಇದನ್ನು ಪರಿಗಣಿಸಿದರೆ ಹಿಂದುಗಳ ಜನಸಂಖ್ಯೆ 96.63 (79.8%) ರಿಂದ 92.63 (76.5%) ಕೋಟಿಗೆ ಇಳಿಯುತ್ತದೆ.
- 2011ರ ಜನಗಣತಿಯ ಪ್ರಕಾರ ವಿವಿಧ ರಾಜ್ಯಗಳ ಹಿಂದು–ಮುಸ್ಲಿಮರ ಶೇಕಡಾ ಪ್ರಮಾಣ ಹೀಗಿದೆ:
  ಜಮ್ಮು ಕಾಶ್ಮೀರ: 28, 68; ಅಸ್ಸಾಂ: 61, 34; ಪಶ್ಚಿಮ ಬಂಗಾಳ: 71, 27
  ಕೇರಳ: 55, 27, 18 (ಕ್ರಿಶ್ಚಿಯನ್); ಉ.ಪ್ರದೇಶ: 80, 19; ಬಿಹಾರ: 83, 17
- ಈಶಾನ್ಯ ರಾಜ್ಯಗಳಲ್ಲಿ ಕ್ರಿಶ್ಚಿಯನ್ನರ ಶೇಕಡಾ ಪ್ರಮಾಣ ಎಂದಿನಂತೆ ಹೆಚ್ಚೇ ಇದೆ.
  ನಾಗಾಲ್ಯಾಂಡ್: 87.9; ಮಿಜೋರಾಂ: 87.16; ಮೇಘಾಲಯ: 74.5;
  ಮಣಿಪುರ: 41.29, (ಹಿಂದು 41.4); ಅರುಣಾಚಲ ಪ್ರದೇಶ: 30.26, (ಹಿಂದು 29)

ವಿವಿಧ ತಜ್ಞರು ಈ ಸಂಖ್ಯೆಗಳ ಆಧಾರದ ಮೇಲೆ ಮುಂದಾಗಬಹುದಾದ ಅನಾಹುತದ ಬಗ್ಗೆ ಎಚ್ಚರಿಕೆಯ ಗಂಟೆ ಬಾರಿಸಿದ್ದಾರೆ. ಇನ್ನು ಮುಂದಿನ 100 ವರ್ಷಗಳಲ್ಲಿ ವಿಭಜಿತ ಭಾರತದಲ್ಲೇ ಮುಸ್ಲಿಮರು ಹಿಂದುಗಳಿಗಿಂತ ಹೆಚ್ಚಾಗಬಹುದೆಂಬ ಆತಂಕ ಕೇಳಿಬರುತ್ತಿದೆ. ಕರ್ನಲ್ ಯು. ಎನ್. ಮುಖರ್ಜಿಯವರು ಮುಸ್ಲಿಂ ಜನಸಂಖ್ಯೆ ಇದೇ ರೀತಿ ಬೆಳೆದಲ್ಲಿ ಮುಂದಿನ 410 ವರ್ಷಗಳಲ್ಲಿ ಭಾರತದಲ್ಲಿ ಹಿಂದು ಎಂಬುವನು ಇರುವುದಿಲ್ಲ ಎಂದು ಎಚ್ಚರಿಸಿದ್ದಾರೆ.

- ಮುಸಲ್ಮಾನರ ಸಂಖ್ಯೆ ಹೆಚ್ಚಾದಂತೆ, ಅಲ್ಲಿನ ಹಿಂದುಗಳ ಜೀವನ ದುಸ್ತರವಾಗುವುದು ಈಗಾಗಲೇ ಅನೇಕ ಕಡೆಗಳಲ್ಲಿ ಅನುಭವಕ್ಕೆ ಬಂದಿದೆ. ಕೇರಳ, ಪಶ್ಚಿಮ ಬಂಗಾಳದ ಹಲವು ಮುಸ್ಲಿಂ ಬಾಹುಳ್ಯವಿರುವ ಜಿಲ್ಲೆಗಳಲ್ಲಿ ಹಿಂದು ಉತ್ಸವಗಳಿಗೆ ಅಡ್ಡಿ, ಹಿಂದು ಹೆಣ್ಣು ಮಕ್ಕಳ ಅಪಹರಣ, ಅತ್ಯಾಚಾರ ಮೊದಲಾದವು ಹೆಚ್ಚಾಗುತ್ತಿವೆ. ಸಿಕ್ಕಿದಷ್ಟು ಬೆಲೆಗೆ ತಮ್ಮ ಆಸ್ತಿಗಳನ್ನು ಮಾರಿ ಬೇರೆ ಊರುಗಳಿಗೆ ಹೋಗುವ ಹಿಂದುಗಳ ಸಂಖ್ಯೆ ಹೆಚ್ಚಾಗುತ್ತಿದೆ.
- 1990ರ ದಶಕದಲ್ಲಿ ಕಾಶ್ಮೀರ ಕಣಿವೆಯಿಂದ ಹೊರದಬ್ಬಲ್ಪಟ್ಟ ಹಿಂದುಗಳು ಇಂದಿಗೂ ಹಿಂತಿರುಗಿ ಹೋಗುವ ಪರಿಸ್ಥಿತಿ ನಿರ್ಮಾಣವಾಗಿಲ್ಲ. ಅವರ ಆಸ್ತಿ ಪಾಸ್ತಿಗಳನ್ನು ಅಲ್ಲಿನ ಬಹುಸಂಖ್ಯಾತ ಮುಸ್ಲಿಮರು ಆಕ್ರಮಿಸಿಕೊಂಡಿದ್ದಾರೆ.

**ಮುಸ್ಲಿಂ ಬಾಹುಳ್ಯದ ದೇಶವಾದ ಇಂಡೋನೇಷಿಯಾದಲ್ಲಿ 1950ರ ದಶಕದಲ್ಲಿ ಒಬ್ಬ ದಂಪತಿಗೆ ಸರಾಸರಿ 5.5 ಮಕ್ಕಳು ಇದ್ದರೆ, 2000ನೇ ದಶಕದಲ್ಲಿ ಅದು 2.2 ಕ್ಕೆ ಇಳಿದಿದೆ. ಇರಾನ್‌ನಲ್ಲಿಯೂ ಇದೇ ಅವಧಿಯಲ್ಲಿ 6.9 ರಿಂದ 1.7 ಕ್ಕೂ, ಸೌದಿ ಅರೇಬಿಯಾದಲ್ಲಿ 7 ರಿಂದ 3ಕ್ಕೂ ಇಳಿದಿದೆ. ಭಾರತದ ಮುಸ್ಲಿಮರಿಗೆ ಈ ದೇಶಗಳ ಮುಸ್ಲಿಮರು ಮಾದರಿಯಾಗಬೇಕಿದೆ.**

- ಪಾಕಿಸ್ತಾನದ ಹಿಂದುಗಳ (ಜನಸಂಖ್ಯೆಯ ಶೇ. 1) ಮೇಲೆ ಅತ್ಯಾಚಾರ, ಆಕ್ರಮಣಗಳು ಅವ್ಯಾಹತವಾಗಿ ನಡೆಯುತ್ತಿದೆ. ಬಾಂಗ್ಲಾದೇಶದಲ್ಲಿ 1941ರಲ್ಲಿ ಶೇ. 28 ರಷ್ಟಿದ್ದ ಹಿಂದುಗಳ ಸಂಖ್ಯೆ ಇಂದು ಶೇ. 9 ಕ್ಕೆ ಕುಸಿದಿದೆ. ಈ ದೇಶಗಳಿಂದ ಮನೆ–ಮಠ ಬಿಟ್ಟು ನಿರಾಶ್ರಿತರಾಗಿ ಭಾರತಕ್ಕೆ ಬರುತ್ತಿರುವ ಹಿಂದುಗಳ ಸಂಖ್ಯೆ ಹೆಚ್ಚಾಗುತ್ತಿದೆ.
- ಈಶಾನ್ಯ ರಾಜ್ಯಗಳಲ್ಲಿ ಕ್ರಿಶ್ಚಿಯನ್ ಮತಾಧಾರಿತ ದೇಶ ನಿರ್ಮಾಣಕ್ಕಾಗಿ ಆತಂಕವಾದಿಗಳು ಸಕ್ರಿಯರಾಗಿದ್ದಾ–ರೆ. ಅದಕ್ಕೆ ಚರ್ಚಿನ ಬೆಂಬಲವಿದೆ ಎನ್ನುವುದು ಈಗ ಗುಟ್ಟಾಗೇನೂ ಉಳಿದಿಲ್ಲ. ಕ್ರಿಶ್ಚಿಯನ್ ಬಹುಸಂಖ್ಯಾತ ಹಳ್ಳಿಗಳಲ್ಲಿ ಮತಾಂತರವಾಗದೇ ಉಳಿದ ಹಿಂದುಗಳ ಮೇಲೆ ಬಹಿಷ್ಕಾರ ಹಾಕುವುದು, ಅವರಿಗೆ ಯಾವುದೇ ಸೌಕರ್ಯಗಳು ಸಿಗದಂತೆ ಮಾಡುವುದು ಮೊದಲಾದವುಗಳು ಅಲ್ಲಿ ನಡೆಯುತ್ತಲೇ ಇವೆ.
- ಹಿಂದುಗಳ ಸಂಖ್ಯೆ ಕಡಿಮೆಯಾದಲ್ಲಿ ಈ ದೇಶದ ಮಹತ್ತರ ಅಂಶಗಳಾದ ಸಹಿಷ್ಣುತೆ ಮತ್ತು ಸರ್ವಧರ್ಮ ಸಮಭಾವದ ಭಾವನೆಗಳಿಗೆ ಪೆಟ್ಟು ಬೀಳಬಹುದು. ಆಗ ಆಂತಕಗ್ರಸ್ತ ಹಿಂದು ಅಸಹಿಷ್ಣುವೂ, ಸ್ವಧರ್ಮ ದುರಭಿಮಾನಿಯೂ ಆದಲ್ಲಿ ಅದು ಮುಸಲ್ಮಾನರಿಗೆ ಮಾರಕವಾಗಲಿದೆ ಎಂದು ಖ್ಯಾತ ಚಿಂತಕ ಮುಜಫ್ಫರ್ ಹುಸೇನ್ ಬಹಳ ಹಿಂದೆಯೇ ಎಚ್ಚರಿಸಿದ್ದಾರೆ.
- ಈ ಸಮಸ್ಯೆಯ ಬಗ್ಗೆ ಗಂಭೀರ ಚಿಂತನೆ ಅಗತ್ಯ. ಸಂವಿಧಾನದಲ್ಲಿ ಕೇವಲ ಅಕ್ಷರರೂಪದಲ್ಲಿರುವ ಸಮಾನ ನಾಗರಿಕ ಸಂಹಿತೆಯನ್ನು ಜಾರಿಗೊಳಿಸಬೇಕಾಗಿದೆ. ಕುಟುಂಬ ಯೋಜನೆಯನ್ನು ಎಲ್ಲ ಮತಾನುಯಾಯಿಗಳೂ ಅಳವಡಿಸಿಕೊಳ್ಳುವಂತೆ ಸರ್ಕಾರದ ಪ್ರಯತ್ನ ಅಗತ್ಯ. ಮುಸ್ಲಿಂ ಹೆಣ್ಣು ಮಕ್ಕಳಿಗೆ ಕುಟುಂಬ ಯೋಜನೆಯ ಬಗ್ಗೆ, ಸಣ್ಣ ಕುಟುಂಬಗಳ ಅನುಕೂಲಗಳ ಬಗ್ಗೆ ಹೆಚ್ಚು ತಿಳುವಳಿಕೆ ನೀಡುವ ಪ್ರಯತ್ನ ಆಗಬೇಕಿದೆ.



- ಹಿಂದುಗಳಲ್ಲಿ ದಂಪತಿಗಳು ಒಂದೇ ಮಗುವನ್ನು ಹೊಂದುವ ಅಪಾಯಕಾರಿ ಪ್ರವೃತ್ತಿ ಹೆಚ್ಚಾಗುತ್ತಿದೆ. ಈಗಾಗಲೇ ಇಂತಹ ಕುಟುಂಬಗಳು ಇದರ ದುಷ್ಪರಿಣಾಮಗಳನ್ನು ಎದುರಿಸುತ್ತಿವೆ. ಮಕ್ಕಳಲ್ಲಿ ಖಿನ್ನತೆ ಮೊದಲಾದ ಮಾನಸಿಕ ಸಮಸ್ಯೆಗಳು, ಯುವಜನರ ಆತ್ಮಹತ್ಯೆ, ತಂದೆತಾಯಿಯರನ್ನು ನೋಡಿಕೊಳ್ಳದೇ ವೃದ್ಧಾಶ್ರಮಗಳಿಗೆ ಸೇರಿಸುವುದು ಮೊದಲಾದವನ್ನು ನಾವು ನೋಡುತ್ತಿದ್ದೇವೆ. ಇದು ಹೀಗೆಯೇ ಮುಂದುವರಿದರೆ ಮುಂದಿನ ದಿನಗಳಲ್ಲಿ ನಮ್ಮದೊಂದು ದುರ್ಬಲ ಸಮಾಜವಾಗುವುದು ಖಂಡಿತ, ಅಷ್ಟೇ ಅಲ್ಲ, ಈಗ ಪಶ್ಚಿಮದ ದೇಶಗಳಲ್ಲಿರುವಂತೆ ನಮ್ಮದೂ ವೃದ್ಧರ ದೇಶವಾಗಬಹುದು. ಈ ದೃಷ್ಟಿಯಿಂದ, ಕನಿಷ್ಠ ಎರಡು ಮಗುವಾದರೂ ಪ್ರತಿ ಕುಟುಂಬದಲ್ಲಿ ಇರಲೇಬೇಕೆಂಬ ನಿಯಮವನ್ನು ಹಿಂದುಗಳು ಪಾಲಿಸುವುದೊಳ್ಳೆಯದು.
- ಹಿಂದುವಿನ ಜನಸಂಖ್ಯೆಯ ಪ್ರಮಾಣದ ಇಳಿಮುಖ ನಿಂತು, ಅದು ಮತ್ತೆ ಏರುವಂತಾಗಲು ಅವಶ್ಯಕವಿರುವ ಎಲ್ಲ ಕ್ರಮಗಳನ್ನು (ಕೌಟುಂಬಿಕ, ಸಾಮಾಜಿಕ, ಸಾಂಸ್ಕೃತಿಕ ಮತ್ತು ರಾಜಕೀಯ) ಹಿಂದು ಸಮಾಜ ಕೈಗೊಳ್ಳಬೇಕು. ಮತಾಂತರದ ತಡೆ, ಪರಾವರ್ತನ, ಸಾಮಾಜಿಕ ಸಾಮರಸ್ಯ, ಹಿಂದು ಯುವಕ–ಯುವತಿಯರಲ್ಲಿ ಧರ್ಮನಿಷ್ಠೆಯ ಬೆಳವಣಿಗೆ, ಬಾಂಗ್ಲಾದೇಶಿ ಮುಸಲ್ಮಾನರನ್ನು ಹಿಂದಕ್ಕೆ ಕಳಿಸುವುದು ಮುಂತಾದವುಗಳು ಆಗಬೇಕಿವೆ. ಹಿಂದು ಸಮಾಜ ಈ ಬಗ್ಗೆ ಗಂಭೀರವಾಗಿ ಯೋಚಿಸಿ, ಕಾರ್ಯಪ್ರವೃತ್ತವಾಗಬೇಕಿದೆ.

# ಕುರಿ ಮಾರಿ ಶೌಚಾಲಯ ನಿರ್ಮಿಸಿದ ಶತಾಯುಷಿ!

ಗ್ರಾಮೀಣ ಪ್ರದೇಶಗಳಲ್ಲಿ ಬಯಲಲ್ಲಿ ಬಹಿರ್ದೆಸೆಗೆ ಹೋಗುವ ಪರಿಪಾಠವನ್ನು ತಪ್ಪಿಸುವ ಸಲುವಾಗಿ ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಹಲವಾರು ಕಾರ್ಯಕ್ರಮಗಳನ್ನು ರೂಪಿಸಿವೆ. ಇದಕ್ಕಾಗಿ ಕೋಟಿಗಟ್ಟಲೆ ಹಣವನ್ನು ಬಿಡುಗಡೆ ಮಾಡುತ್ತಿವೆ. ಆದರೂ ಜನ ಬರುವ ಹಣ ಪಡೆದುಕೊಂಡರೂ, ಶೌಚಾಲಯ ನಿರ್ಮಿಸಿಕೊಳ್ಳದೆ, ಬಯಲಲ್ಲೇ ಶೌಚಕ್ಕೆ ಹೋಗುವ ಸಾಕಷ್ಟು ಉದಾಹರಣೆಗಳು ನಮ್ಮ ಮುಂದಿದೆ. ಆದರೆ ಇಲ್ಲೊಬ್ಬ ಶತಾಯುಷಿ ಮಹಿಳೆ ಬಯಲಲ್ಲಿ ಶೌಚಕ್ಕೆ ಹೋಗುವ ಮುಜುಗರದಿಂದ ತನ್ನ ಗ್ರಾಮದ ಮಹಿಳೆಯರನ್ನು ಬಚಾವ್ ಮಾಡುವ ಸಲುವಾಗಿ ತನ್ನ ಕುರಿಗಳನ್ನೇ ಮಾರಿ, ಶೌಚಾಲಯ ನಿರ್ಮಿಸಿ, ಇಡಿ ರಾಷ್ಟ್ರಕ್ಕೆ ಮಾದರಿಯಾಗಿದ್ದಾರೆ.

ಛತ್ತೀಸಗಢದ ಧಮ್ತ್ರಿ ಜಿಲ್ಲೆಯ ವ್ಯಾಪ್ತಿಯಲ್ಲಿ ಕೋಟಾಭರಿ ಗ್ರಾಮವಿದೆ. ಈ ಗ್ರಾಮದಲ್ಲಿ ಬಯಲು ಶೌಚ ಸಮಸ್ಯೆ ತಡೆಯಲು ಜಿಲ್ಲಾಡಳಿತದಿಂದ ಹಿಡಿದು ಗ್ರಾಮ ಪಂಚಾಯತ್‌ವರೆಗಿನ ಸಂಸ್ಥೆಗಳು ಸಾಕಷ್ಟು ಪ್ರಯತ್ನಿಸಿದ್ದವು. ಆದರೆ ಆ ಪ್ರಯತ್ನಗಳೆಲ್ಲವೂ ವಿಫಲವಾಗಿದ್ದವು. ಅದೇನಾಯಿತೋ. ಒಂದು ದಿನ ಈ ಗ್ರಾಮದ ನಿವಾಸಿ 102 ವರ್ಷದ ವೃದ್ಧೆ ಕುವಾರ್‌ಬಾಯ್ ಯಾದವ್ ಎಂಬವರು ತಮ್ಮ ಕುರಿಗಳನ್ನು ಮಾರಿ ಶೌಚಾಲಯ ನಿರ್ಮಿಸಲು ನಿರ್ಧರಿಸಿದರು. ಅದರಂತೆ ಅವರು ತಮ್ಮ ಕುರಿಗಳನ್ನು 22 ಸಾವಿರ ರೂ.ಗಳಿಗೆ ಮಾರಾಟ ಮಾಡಿ, ಶೌಚಾಲಯ ನಿರ್ಮಿಸಲು ಮುಂದಾದರು. ವಿಷಯ ತಿಳಿದ ಧಮ್ತ್ರಿ ಜಿಲ್ಲಾಡಳಿತ ಕೂಡ ಕುವಾರ್‌ಬಾಯ್ ಯಾದವ್ ಅವರ ಬೆಂಬಲಕ್ಕೆ ನಿಂತಿತು. ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ, ಶೌಚಾಲಯ ನಿರ್ಮಾಣಕ್ಕೆ ಅಗತ್ಯ ಸಬ್ಸಿಡಿಯನ್ನು ಬಿಡುಗಡೆ ಮಾಡಿತು. ತಮ್ಮ ಗ್ರಾಮದ ವೃದ್ಧೆಯೊಬ್ಬರು ಇಂಥ ಸಾಹಸಕ್ಕೆ ಕೈಹಾಕಿದ್ದನ್ನು ಕಂಡು ಪ್ರೇರೇಪಿತರಾದ ಗ್ರಾಮದ 450 ನಿವಾಸಿಗಳು, ತಾವು ಕೂಡ ತಮ್ಮ ತಮ್ಮ ಮನೆಯಲ್ಲಿ ಶೌಚಾಲಯ ನಿರ್ಮಿಸಿಕೊಳ್ಳಲು ಮುಂದಾದರು. ಇದರಿಂದಾಗಿ ಕೋಟಾಭರಿ ಗ್ರಾಮ ಕಳೆದ ಜುಲೈನಲ್ಲಿ ಬಯಲು ಶೌಚ ಮುಕ್ತ ಗ್ರಾಮವೆಂದು ಜಿಲ್ಲಾಡಳಿತದಿಂದ ಘೋಷಿಸಲ್ಪಟ್ಟಿತು.



# 10 ಉಗ್ರರ ಕೊಂದು ಹುತಾತ್ಮನಾದ ಯೋಧ

11 ದಿನಗಳಲ್ಲಿ 10 ಉಗ್ರರನ್ನು ಕೊಂದು ಶೌರ್ಯ ಮೆರೆದಿದ್ದ ವಿಶೇಷ ದಳದ ಕಮ್ಯಾಂಡೋ ಲ್ಯಾನ್ಸ್ ನಾಯಕ್ ಮೋಹನ್‌ನಾಥ್ ಗೋಸ್ವಾಮಿ ಉಗ್ರರೊಂದಿಗೆ ಹೋರಾಡುತ್ತಲೇ ಹುತಾತ್ಮರಾಗಿದ್ದಾರೆ.

ಜಮ್ಮು–ಕಾಶ್ಮೀರದ ಹಂದ್ವಾರದಲ್ಲಿ ಉಗ್ರರೊಂದಿಗೆ ನಡೆದ ಗುಂಡಿನ ಕಾಳಗದಲ್ಲಿ ಗೋಸ್ವಾಮಿ ಹುತಾತ್ಮರಾಗಿದ್ದಾರೆ. ಇದಕ್ಕೂ ಮುನ್ನ ಗೋಸ್ವಾಮಿ ಕಳೆದ 11 ದಿನಗಳಲ್ಲಿ ಕಾಶ್ಮೀರ ಕಣಿವೆಯಲ್ಲಿ ನಡೆದ ವಿವಿಧ ಕಾರ್ಯಾಚರಣೆಗಳಲ್ಲಿ 10 ಉಗ್ರರನ್ನು ಕೊಂದಿದ್ದರು ಮತ್ತು ಒಬ್ಬ ಉಗ್ರವಾದಿಯನ್ನು ಜೀವಂತವಾಗಿ ಸೆರೆ ಹಿಡಿಯುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು ಎಂದು ಸೇನಾ ವಕ್ತಾರರಾದ ಕರ್ನಲ್ ಎಸ್.ಡಿ. ಗೋಸ್ವಾಮಿ ತಿಳಿಸಿದ್ದಾರೆ. 2002ರಲ್ಲಿ ಸೇನೆಗೆ ಸೇರ್ಪಡೆಯಾಗಿದ್ದ ಲ್ಯಾನ್ಸ್ ನಾಯಕ್ ಗೋಸ್ವಾಮಿ ಪ್ಯಾರಾ ಕಮಾಂಡೋ ಪಡೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದರು. ತಮ್ಮ ಸಾಮರ್ಥ್ಯಗಳಿಂದಾಗಿ ಅತ್ಯುತ್ತಮ ಕಮಾಂಡೋ ಎಂದು ಗುರುತಿಸಿಕೊಂಡಿದ್ದರು. ಆಗಸ್ಟ್ 23ರಂದು ಹಂದ್ವಾರದಲ್ಲಿ ನಡೆದ ಕಾರ್ಯಾಚರಣೆಯಲ್ಲಿ ಪಾಕಿಸ್ತಾನ ಮೂಲದ ಲಷ್ಕರ್ ಎ ತೋಯಿಬಾ ಸಂಘಟನೆಯ 3 ಉಗ್ರರನ್ನು ಹೊಡೆದುರುಳಿಸಿದ್ದರು. ನಂತರ ಆಗಸ್ಟ್ 26 ಮತ್ತು 27ರಂದು ರಫಿಯಾಬಾದ್‌ನಲ್ಲಿ 2 ದಿನ ನಡೆದ ಕಾರ್ಯಾಚರಣೆಯಲ್ಲಿ ಪಾಲ್ಗೊಂಡು ಲಷ್ಕರ್ ಎ ತೋಯಿಬಾ ಸಂಘಟನೆಯ ಮೂವರು ಉಗ್ರರನ್ನು ಹೊಡೆದುರುಳಿಸಿದ್ದರು. ಈ ಕಾರ್ಯಾಚರಣೆಯಲ್ಲಿ ಒಬ್ಬ ಉಗ್ರನನ್ನು ಜೀವಂತ ಸೆರೆ ಹಿಡಿಯಲಾಗಿತ್ತು. ತದನಂತರ ಹಂದ್ವಾರದಲ್ಲಿ ಕಾರ್ಯಾಚರಣೆಯಲ್ಲಿ ತೊಡಗಿದ್ದಾಗ, ಉಗ್ರರ ಗುಂಡಿಗೆ ಬಲಿಯಾಗಿದ್ದಾರೆ.

# ಬದುಕು ಬದಲಿಸಿದ 'ಒಂದು ರೂಪಾಯಿ ವೈದ್ಯ'

ಬದುಕಿನಲ್ಲಿ ಸದಾ ಕಷ್ಟಗಳು ಎದುರಾಗುತ್ತಲೇ ಇರುತ್ತವೆ. ಅವುಗಳಿಗೆ ಎದೆಗುಂದದೆ ಪರಿಸ್ಥಿತಿಯನ್ನು ಸುಧಾರಿಸಲು ಮಾರ್ಗವನ್ನು ಅನ್ವೇಷಿಸಿ ಕಾರ್ಯಮಗ್ನರಾಗುವವರು ಕೀರ್ತಿವಂತರಾಗುತ್ತಾರೆ. ಇದಕ್ಕೆ ಒಂದು ನಿದರ್ಶನ ಇಲ್ಲಿದೆ.

ಮಧ್ಯಪ್ರದೇಶದ ಫತೇನಗರ್ ಪ್ರಾಂತ ಒಂದೊಮ್ಮೆ ಸಮೃದ್ಧವಾಗಿತ್ತು. ಅಲ್ಲಿ ಶೇ. 80ರಷ್ಟು ಜನ ಕೃಷಿಕರು. ಆದರೆ ಏಳೆಂಟು ವರ್ಷಗಳು ಸತತವಾಗಿ ಮಳೆಬಾರದೆ ಜನರ ಬದುಕು ದಾರುಣವಾಗಿತ್ತು. ಆ ಭಾಗದಲ್ಲಿ ಸೋಮ್ಲಿ ಎಂಬ ಹೊಳೆಯೇನೋ ಇದ್ದಿತು. ಮೇಲ್ಭಾಗದಲ್ಲಿ ಮಳೆಯಾದರಷ್ಟೆ ಇಲ್ಲಿ ಸ್ವಲ್ಪ ನೀರಿನ ದರ್ಶನವಾಗುತ್ತಿತ್ತು. ಅದು ಯಾವುದಕ್ಕೂ ಒದಗುವಂತಿರಲಿಲ್ಲ. ದನಕರುಗಳಿಗೆ ಕುಡಿಯಲು ನೀರೂ ಅಲಭ್ಯವಾಗಿತ್ತು. ಈ ಸ್ಥಿತಿಯನ್ನು ನೋಡಿ ಮರುಗಿ ಇದಕ್ಕೆ ಪರಿಹಾರ ಯೋಜಿಸಿದ್ದು ಯಾವ ಸರಕಾರವಾಗಲಿ, ಸಂಸ್ಥೆಯಾಗಲಿ ಅಲ್ಲ; ಒಬ್ಬ ಸಾಮಾನ್ಯ ಅನುಕಂಪಪೂರ್ಣ ವ್ಯಕ್ತಿ.

ಆತನ ಹೆಸರು ಅನಿಲ್‌ಜೋಶಿ. ವೃತ್ತಿಯಲ್ಲಿ ಆಯುರ್ವೇದ ವೈದ್ಯ. ಹೊಳೆಯ ಹರಿವಿನ ಗುಂಟ ಅಲ್ಲಲ್ಲಿ ಚೆಕ್‌ಡ್ಯಾಮ್‌ಗಳನ್ನು ನಿರ್ಮಿಸಿದಲ್ಲಿ ಇರುವ ಅಲ್ಪ ಜಲ ಪೋಲಾಗದೆ ನೆಲದಲ್ಲಿ ಅಂತರ್ಜಲದ ಸೆಲೆ ಉತ್ತಮಗೊಳ್ಳುತ್ತದೆ – ಎಂದು ತಜ್ಞರಿಂದ ಅರಿತುಕೊಂಡ. ಅಸಾಧ್ಯವೆಂದೇ ತೋರುವ ಈ ಕಾರ್ಯಕ್ಕೆ ಯಾರ ನೆರವೂ ದೊರೆಯುವಂತಿರಲಿಲ್ಲ. ನಾನೇ ಏಕೆ ಪ್ರಯತ್ನಿಸಬಾರದು – ಎಂದುಕೊಂಡ. ಪ್ರತಿದಿನ ತನ್ನಲ್ಲಿ ಚಿಕಿತ್ಸೆಗಾಗಿ ಬರುತ್ತಿದ್ದ ಸ್ಥಳೀಯರಿಂದ ಒಬ್ಬೊಬ್ಬರಿಂದ ಒಂದೊಂದು ರೂಪಾಯಿ ಮಾತ್ರ ದೇಣಿಗೆ ಕೇಳಿದ. ಈತ ಉದ್ದೇಶವನ್ನು ತಿಳಿಸಿದಾಗ ಅಲಕ್ಷ್ಯದಿಂದ ಅಪಹಾಸ್ಯ ಮಾಡಿದವರೇ ಹೆಚ್ಚು. ಆದರೆ ಅನಿಲ್ ಜೋಶಿ ಛಲವನ್ನು ಬಿಡಲಿಲ್ಲ. ಒಂದು ವರ್ಷದ ಅವಧಿಯಲ್ಲಿ ಹೀಗೆ ಸಂಗ್ರಹಿಸಿದ ಪುಡಿಗಾಸಿನ ನಿಧಿಯನ್ನು ಬಳಸಿ ಸಿಮೆಂಟನ್ನು ಕೊಂಡು ಚೆಕ್‌ಡ್ಯಾಮನ್ನು ನಿರ್ಮಿಸಿಯೇ ಬಿಟ್ಟ.

ಮುಂದಿನ ಚೆಕ್‌ಡ್ಯಾಮ್‌ಗಳಿಗೆ ಹಣ ಸಾಲದಿದ್ದಾಗ ಪತ್ನಿಯ ಕೊರಳಲ್ಲಿದ್ದ ಸರವನ್ನು ಮಾರಿ ಕೆಲಸ ಮುಂದುವರಿಸಿದ. ಈಗ ಜನರಿಗೆ ಈ ಕಾರ್ಯದ ಮಹತ್ವ ಅರಿವಾಗತೊಡಗಿತು. ಜನ ಮುಂದೆ ಬಂದು ಕೈಯಲ್ಲಾದ ಹಣ ನೀಡತೊಡಗಿದರು. ಅನಿಲ್ ಜೋಶಿ ಒಬ್ಬೊಬ್ಬರಿಂದ ಕೋರುತ್ತಿದ್ದುದು ಒಂದು ರೂಪಾಯಿ ಮಾತ್ರ.

ನೋಡುನೋಡುತ್ತಿದ್ದಂತೆ ಪವಾಡವೇ ನಡೆಯಿತು. ನೂರಕ್ಕೂ ಹೆಚ್ಚು ಚೆಕ್‌ಡ್ಯಾಮ್‌ಗಳು ಎದ್ದುನಿಂತವು. ಅಂತರ್ಜಲ ವೃದ್ಧಿಯಾಗಿ, ಜನ ಜಾನುವಾರುಗಳಿಗೆ ನೀರು ದೊರೆಯತೊಡಗಿತು. ಬೆಂಗಾಡಾಗಿದ್ದ ಕಡೆ ಹಸಿರು ಕಾಣತೊಡಗಿತು. ಗಿಡ–ಮರಗಳು ನಳನಳಿಸಿದವು. ಎಷ್ಟೋ ಕಾಲದಿಂದ ಸ್ಥಗಿತಗೊಂಡಿದ್ದ ಹ್ಯಾಂಡ್‌ಪಂಪ್‌ಗಳು ನೀರನ್ನು ಹೊರಚೆಲ್ಲತೊಡಗಿದವು.

ಅನಿಲ್ ಜೋಶಿ ಈಗ ಪ್ರಾಂತದಲ್ಲೆಲ್ಲ 'ಒಂದು ರೂಪಾಯಿ ವೈದ್ಯ' ಎಂದೇ ಹೆಸರಾಗಿದ್ದಾನೆ. ಈ 'ಅಪರ ಭಗೀರಥ'ನಿಂದಾಗಿ ಆ ಸುತ್ತಲಿನ ಜನ ಈಗ ನೆಮ್ಮದಿ ಕಾಣುವಂತಾಗಿದೆ. ಬೇಸಾಯ ಚೇತರಿಸಿಕೊಂಡಿದೆ. ಪ್ರತ್ಯತ್ನಶೀಲತೆಯೇ ದೈವವೆಂದು ಕರೆಯುತ್ತಾರೆನ್ನಲು ಇದಕ್ಕಿಂತ ನಿದರ್ಶನ ಬೇಕೆ?

# ಐಟಿಬಿಪಿ ಯೋಧರಿಂದ ಗಂಗಾ ಸಾಹಸ ಯಾತ್ರೆ

ಇಂಡೋ ಟಿಬೆಟಿಯನ್ ಬಾರ್ಡರ್ ಪೊಲೀಸ್ (ಐಟಿಬಿಪಿ) ಪಡೆಯ ಯೋಧರು 'ಸ್ವಚ್ಛ ಗಂಗಾ' ಅಭಿಯಾನದ ಅಂಗವಾಗಿ ದೇವಪ್ರಯಾಗದಿಂದ ಬಂಗಾಳಕೊಲ್ಲಿಯವರೆಗೆ 2350 ಕಿ.ಮೀ. ದೂರ ಗಂಗಾ ನದಿಯಲ್ಲಿ ರಾಫ್ಟಿಂಗ್ ಮಾಡಲು ಸಿದ್ಧತೆ ನಡೆಸಿದ್ದಾರೆ. ಇಂಡೋ ಟಿಬೆಟಿಯನ್ ಬಾರ್ಡರ್ ಪೊಲೀಸ್ (ಐಟಿಬಿಪಿ) ಪಡೆಯ 30 ಪರಿಣಿತ ಯೋಧರ ತಂಡ ಅಕ್ಟೋಬರ್ 2ರಂದು ಉತ್ತರಾಖಂಡದ ದೇವಪ್ರಯಾಗದಲ್ಲಿರುವ ಸಂಗಮದಿಂದ ತಮ್ಮ ಯಾತ್ರೆಯನ್ನು ಪ್ರಾರಂಭಿಸಲಿದ್ದು, ಡಿಸೆಂಬರ್‌ನಲ್ಲಿ ಬಂಗಾಳ ಕೊಲ್ಲಿಯಲ್ಲಿ ಮುಕ್ತಾಯಗೊಳಿಸಲಿದ್ದಾರೆ. ಈ ಅಭಿಯಾನದ ಅಂಗವಾಗಿ ಐಟಿಬಿಪಿ ಯೋಧರು ಗಂಗಾನದಿಯಲ್ಲಿ ರಾಫ್ಟಿಂಗ್ ಮಾಡುತ್ತಾ 2350 ಕಿ.ಮೀ. ಕ್ರಮಿಸಲಿದ್ದಾರೆ. ಇವರು ಉತ್ತರಾಖಂಡ, ಉತ್ತರ ಪ್ರದೇಶ, ಬಿಹಾರ, ಜಾರ್ಖಂಡ್ ಮತ್ತು ಪಶ್ಚಿಮ ಬಂಗಾಳ ರಾಜ್ಯಗಳ 49 ನಗರಗಳಿಗೆ ಭೇಟಿ ನೀಡಲಿದ್ದಾರೆ. ಇವರ ಜತೆಯಲ್ಲೇ ಸುಮಾರು 10 ಸಾವಿರ ಐಟಿಬಿಪಿ ಯೋಧರು ಗಂಗಾ ನದಿಯ ಶುದ್ಧೀಕರಣ ಕೆಲಸದಲ್ಲಿ ತಮ್ಮನ್ನು ತೊಡಗಿಸಿಕೊಳ್ಳಲಿದ್ದಾರೆ. ಯೋಧರ ತಂಡವು ನದಿಯಲ್ಲಿ ತೇಲುತ್ತಿರುವ ಪಾಲಿಥೀನ್ ಚೀಲಗಳು ಮತ್ತು ಇತರೆ ವಸ್ತುಗಳನ್ನು ನದಿಯಿಂದ ಹೊರಗೆ ತೆಗೆದು ಹಾಕಲಿದ್ದಾರೆ. ಜತೆಯಲ್ಲೇ ಗಂಗಾ ಶುದ್ಧೀಕರಣದ ಕುರಿತು ಜಾಗೃತಿ ಅಭಿಯಾನ ನಡೆಸಲಿದ್ದಾರೆ. 1962ರಲ್ಲಿ ಐಟಿಬಿಪಿ ಪಡೆಯನ್ನು ಸ್ಥಾಪಿಸಲಾಗಿದ್ದು, ಭಾರತ ಮತ್ತು ಚೀನಾ ಗಡಿಯನ್ನು ಕಾಯಲು ನಿಯೋಜಿಸಲಾಗಿದೆ.



# ಹಸುಗಳಿಂದ ಹಸನಾದ ಬದುಕು




ಸಾಲದ ಶೂಲಕ್ಕಂಜಿ ಕಂಗಾಲಾಗಿರುವ ರೈತರಿಗೆ ಆತ್ಮವಿಶ್ವಾಸ ತುಂಬಬಲ್ಲಂಥ ಸಾಧನೆಯಿದು. ಒಣ ಬೇಸಾಯದಲ್ಲೇ ಹೈನುಗಾರಿಕೆ ಮೂಲಕ ಪ್ರತಿ ತಿಂಗಳು 50 ಸಾವಿರ ಆದಾಯ ಪಡೆಯುವ ಈ ರೈತನ ಸಾಧನೆ ಇತರರಿಗೆ ಮಾದರಿ. ಕೃಷಿಯೊಂದಿಗೆ ಪೂರಕ ಚಟುವಟಿಕೆಗಳನ್ನು ಹಮ್ಮಿಕೊಳ್ಳುವ ಮೂಲಕ ಆರ್ಥಿಕವಾಗಿ ಸಬಲರಾಗಬಹುದು ಎಂಬುದಕ್ಕೆ ಮೈಲಾರ ಗ್ರಾಮದ ರೈತ ರೇವಣಸಿದ್ದಪ್ಪ ಪ್ರತ್ಯಕ್ಷ ಉದಾಹರಣೆ.

ವಿಜಯಪುರ ಜಿಲ್ಲೆಯಲ್ಲಿ ಭೀಕರ ಬರದ ಛಾಯೆಯಿದೆ. ರೈತ ಕಂಗಾಲಾಗಿದ್ದಾನೆ. ಸಾಲಬಾಧೆ ತಾಳಲಾಗುತ್ತಿಲ್ಲ ಎಂದು ಕೈಚೆಲ್ಲಿ ಕುಳಿತಿದ್ದಾನೆ. ಆದರೆ, ಬರಗಾಲಪೀಡಿತ ಪ್ರದೇಶವೆಂಬ ಹಣೆಪಟ್ಟಿ ಹೊತ್ತಿರುವ ಇಂಡಿ ತಾಲೂಕಿನ ಮೈಲಾರ ಗ್ರಾಮದ ರೇವಣಸಿದ್ದಪ್ಪ ಆನಂದಪ್ಪ ಬುಕ್ಕಿ ಹಾಗೂ ಇವರ ಪುತ್ರ ಮಾಂತೇಶ ಬುಕ್ಕಿ ನೆಮ್ಮದಿ ಕಳಕೊಂಡಿಲ್ಲ. ಕೇವಲ ಹಾಲಿನ ಉತ್ಪನ್ನದಲ್ಲೇ ವರ್ಷಕ್ಕೆ 6 ಲಕ್ಷ ರೂ. ಆದಾಯ ಪಡೆಯುವ ಮೂಲಕ ಕೃಷಿಯ ಕುರಿತು ಆತ್ಮವಿಶ್ವಾಸ ತುಂಬುತ್ತಿದ್ದಾರೆ.

ಐದು ವರ್ಷಗಳ ಹಿಂದೆ 21 ಸಾವಿರ ಕೊಟ್ಟು ಮಹಾರಾಷ್ಟ್ರದಿಂದ 2 ಜರ್ಸಿ ಆಕಳು ತಂದಿದ್ದಾರೆ. ಅಲ್ಲಿಂದ ಆರಂಭವಾದ ಬುಕ್ಕಿ ಮನೆತನದ ಹೈನುಗಾರಿಕೆ ಈ ವರೆಗೆ 13 ಆಕಳುಗಳವರೆಗೆ ಯಶಸ್ವಿಯಾಗಿ ಮುಂದುವರಿದಿದೆ. ಇರುವ 13 ಆಕಳುಗಳಲ್ಲಿ ಆರು ಆಕಳು ಹಾಲು ಕೊಡುತ್ತಿವೆ. ದಿನಕ್ಕೆ 120 ಲೀಟರ್ ಹಾಲು ಉತ್ಪಾದನೆಯಾಗುತ್ತದೆ. ಇದರಿಂದ ತಿಂಗಳಿಗೆ ಒಟ್ಟು 90 ಸಾವಿರ ರೂ. ಆದಾಯ ಬರುತ್ತಿದೆ. ಇದರಲ್ಲಿ ಜಾನುವಾರು ನಿರ್ವಹಣೆಗೆ 35–40 ಸಾವಿರ ರೂ. ಖರ್ಚಾಗುತ್ತಿದೆ. ಕೆಲ ಸಂದರ್ಭ ಆದಾಯದ ಮೊತ್ತ ಲಕ್ಷ ಮೀರುತ್ತದೆ ಎನ್ನುತ್ತಾರೆ ರೇವಣಸಿದ್ದಪ್ಪ ಬುಕ್ಕಿ.

**ನಿರ್ವಹಣೆ ಕ್ರಮ:** ಒಟ್ಟು 12 ಎಕರೆ ಒಣ ಬೇಸಾಯ ಜಮೀನು ಹೊಂದಿರುವ ರೇವಣಸಿದ್ದಪ್ಪ, ಜಾನುವಾರುಗಳ ಮೇವಿಗಾಗಿ 6 ಎಕರೆ ಮೀಸಲಿಟ್ಟಿದ್ದಾರೆ. ಸದ್ಯ ಮಳೆ ಇಲ್ಲದಿದ್ದರೂ ಆಫ್ರಿಕಾ ಮೂಲದ ಬಿಳಿ ಮೆಕ್ಕೆ ಜೋಳ ಹಸಿರಿನಿಂದ ನಳನಳಿಸುತ್ತಿದೆ. ಜಮೀನಿನಲ್ಲಿ ಕೊಳವೆ ಬಾವಿ ಕೊರೆಸಿದ್ದು ಕೇವಲ ಒಂದು ಇಂಚು ನೀರು ಸಿಗುತ್ತಿದೆ. ಅದರಲ್ಲೇ ಮೇವಿನ ನಿರ್ವಹಣೆ ಮಾಡುತ್ತಿದ್ದಾರೆ. ಮೇವು ಕಟಾವಿಗೆ ಯಂತ್ರವನ್ನೂ ಖರೀದಿಸಿದ್ದಾರೆ.

ಜಾನುವಾರುಗಳಿಗಾಗಿ 35 X 60 ಅಡಿ ಅಳತೆಯ ಶೆಡ್ ನಿರ್ಮಾಣ ಮಾಡಲಾಗಿದೆ. ಪ್ರತಿ ದಿನ 3 ಕೆಜಿ ನುಚ್ಚು, 2 ಕೆಜಿ ಹತ್ತಿಕಾಳು, ಹಿಂಡಿ, ಗೋಧಿ, ಬಿಳಿ ಜೋಳ, ಶೇಂಗಾ ಹಿಂಡಿ ಕಲಸಿ ಜಾನುವಾರುಗಳಿಗೆ ನೀಡುತ್ತಾರೆ. ನುಚ್ಚು ತಯಾರಿಸಲು ಒಂದು ಗಿರಣಿ ಕೂಡ ಶೆಡ್‌ನಲ್ಲಿ ನಿರ್ಮಿಸಲಾಗಿದೆ. ಜಾನುವಾರುಗಳ ಗೊಬ್ಬರವನ್ನು ಜಮೀನಿಗೆ ಬಳಸುವ ಮೂಲಕ ಸಾವಯವ ಕೃಷಿ ಪದ್ಧತಿ ಅಳವಡಿಸಿಕೊಂಡಿದ್ದಾರೆ. ಈವರೆಗೂ ಗೊಬ್ಬರಕ್ಕಾಗಿ ನಯಾಪೈಸೆ ಖರ್ಚು ಮಾಡಿಲ್ಲವೆಂದು ರೇವಣಸಿದ್ದಪ್ಪ ಹೆಮ್ಮೆಯಿಂದ ಹೇಳುತ್ತಾರೆ. ಕಡಿಮೆ ವೆಚ್ಚದಲ್ಲೇ ಹೈನುಗಾರಿಕೆ ಆರಂಭಿಸುವ ಮೂಲಕ ಇಂದು ರೇವಣಸಿದ್ದಪ್ಪ ಹೆಚ್ಚಿನ ಆದಾಯ ಪಡೆಯುತ್ತಿದ್ದಾರೆ. ಬರಗಾಲದ ಇಂಥ ಸಂದರ್ಭದಲ್ಲಿ ರೈತರು ವೈಜ್ಞಾನಿಕವಾಗಿ ಹೈನುಗಾರಿಕೆ ಆರಂಭಿಸುವ ಮೂಲಕ ಸಬಲರಾಗಬೇಕು. ಮಾಹಿತಿಗಾಗಿ ರೇವಣಸಿದ್ದಪ್ಪ ಬುಕ್ಕಿ (ಮೊ. 8971034349) ಅವರನ್ನು ಸಂಪರ್ಕಸಬಹುದು.

ಸಂಪಾದಕೀಯ ಸಹಕಾರ ರಾಧಾಕೃಷ್ಣ ಹೊಳ್ಳ, ರಾಜೇಶ್ ಪದ್ಮಾರ್, ಮೊಳಹಳ್ಳಿ ಅನಿಲ್‌ಕುಮಾರ್



## ಅರಣ್ಯ ನಾಶ ಭಾರತದಲ್ಲೇ ಹೆಚ್ಚು

ಪ್ರಪಂಚದಾದ್ಯಂತ ಅರಣ್ಯನಾಶ ತೀವ್ರ ಪ್ರಮಾಣದಲ್ಲಿ ನಡೆಯುತ್ತಿದ್ದು, ಮುಖ್ಯವಾಗಿ ಭಾರತದಲ್ಲಿ ಅತಿ ತೀವ್ರಗತಿಯಲ್ಲಿ ಅರಣ್ಯ ಕಣ್ಮರೆಯಾಗುತ್ತಿದೆ ಎಂದು ವಿಶ್ವ ಸಂಸ್ಥೆಯ ವಿಶ್ವ ಅರಣ್ಯ ಸಂಪತ್ತು ಮೌಲ್ಯಮಾಪನ ವರದಿ–2015 ತಿಳಿಸಿದೆ.

ಅರಣ್ಯ ನಾಶ ತಡೆಯಲು ಸಾಕಷ್ಟು ಯೋಜನೆಗಳನ್ನು ಹಮ್ಮಿಕೊಂಡಿದ್ದರೂ ಸಹ 1990ಕ್ಕೆ ಹೋಲಿಸಿದರೆ ಪ್ರಪಂಚದಾದ್ಯಂತ ಶೇ. 3ರಷ್ಟು ಅರಣ್ಯ ಕಣ್ಮರೆಯಾಗಿದೆ ಎಂದು ವಿಶ್ವಸಂಸ್ಥೆಯ ವರದಿ ತಿಳಿಸಿದೆ. 1990 ರಿಂದ 2015ರ ವರೆಗಿನ ಅವಧಿಯಲ್ಲಿ ಪ್ರಪಂಚದಾದ್ಯಂತ 319 ಮಿಲಿಯನ್ ಎಕರೆ (31.8 ಕೋಟಿ ಎಕರೆ) ಅರಣ್ಯ ಭೂಮಿ ನಾಶವಾಗಿದೆ. ಈ ಅವಧಿಯಲ್ಲಿ ಒಟ್ಟು ಅರಣ್ಯ ಪ್ರಮಾಣ 1020 ಕೋಟಿ ಎಕರೆಯಿಂದ 988 ಕೋಟಿ ಎಕರೆಗೆ ಇಳಿಕೆಯಾಗಿದೆ. ಉಷ್ಣವಲಯದ ಅರಣ್ಯ ಭೂಮಿ ಹೆಚ್ಚಿನ ಅಪಾಯಕ್ಕೆ ಸಿಲುಕಿದೆ. ಕೃಷಿಗಾಗಿ ಅರಣ್ಯ ಭೂಮಿ ಒತ್ತುವರಿ ಅರಣ್ಯ ನಾಶಕ್ಕೆ ಪ್ರಮುಖ ಕಾರಣ ಎಂದು ತಿಳಿಸಲಾಗಿದೆ. ಬ್ರೆಜಿಲ್, ಇಂಡೋನೇಷಿಯಾ, ನೈಜೀರಿಯಾದಲ್ಲಿ ಈ ಸಮಸ್ಯೆ ಹೆಚ್ಚಾಗಿದೆ. ಅರಣ್ಯ ನಾಶದ ಪ್ರಮಾಣ ಭಾರತದಲ್ಲಿ ಅತೀ ಹೆಚ್ಚಿದ್ದು, ನಂತರದ ಸ್ಥಾನದಲ್ಲಿ ವಿಯೇಟ್ನಾಂ ಮತ್ತು ಘಾನಾ ರಾಷ್ಟ್ರಗಳಿವೆ.

ಪ್ರಾಚೀನ ಸಂಸ್ಕೃತಿಯನ್ನು ಯುವ ಜನತೆಗೆ ಪರಿಚಯಿಸುವ ಹಾಗೂ ನೈತಿಕ ಮೌಲ್ಯಗಳನ್ನು ಪ್ರಚುರಪಡಿಸುವ ನಿಟ್ಟಿನಲ್ಲಿ ಶಾಲಾ ಕಾಲೇಜು ಪಠ್ಯದಲ್ಲಿ ರಾಮಾಯಣ, ಮಹಾಭಾರತ ಹಾಗೂ ಭಗವದ್ಗೀತೆಯ ಅಂಶಗಳನ್ನು ಅಳವಡಿಸಲಾಗುವುದು ಎಂದು ಕೇಂದ್ರ ಸರ್ಕಾರ ತಿಳಿಸಿದೆ. ಈ ವಿಚಾರವಾಗಿ ಕೇಂದ್ರ ಸಂಸ್ಕೃತಿ ಖಾತೆಯ ಸಹಾಯಕ ಸಚಿವ ಮಹೇಶ್ ಶರ್ಮಾ ಮಾಹಿತಿ ನೀಡಿದ್ದು, ಪಠ್ಯದಲ್ಲಿ ಭಾರತೀಯ ಸಂಸ್ಕೃತಿಗೆ ಸಂಬಂಧಿಸಿದ ವಿಚಾರಗಳನ್ನು ಅಳವಡಿಸುವ ನಿಟ್ಟಿನಲ್ಲಿ ಮಾನವ ಸಂಪನ್ಮೂಲ ಅಭಿವೃದ್ಧಿ ಹಾಗೂ ಸಂಸ್ಕೃತಿ ಸಚಿವಾಲಯಗಳು ರೂಪುರೇಷೆ ಸಿದ್ಧಪಡಿಸುತ್ತಿವೆ. ಶೀಘ್ರದಲ್ಲೇ ಇದನ್ನು ಕಾರ್ಯರೂಪಕ್ಕೆ ತರಲಾಗುವುದು ಎಂದಿದ್ದಾರೆ.



**ಮೂರು ತಿಂಗಳುಗಳ ಹಿಂದೆಯಷ್ಟೇ ಮಣಿಪುರದಲ್ಲಿ 18 ಸೈನಿಕರ ಕಗ್ಗೊಲೆಗೈದಿದ್ದ ನ್ಯಾಷನಲಿಸ್ಟ್ ಸೋಶಿಯಲಿಸ್ಟ್ ಕೌನ್ಸಿಲ್ ಆಫ್ ನಾಗಾಲ್ಯಾಂಡ್ – ಖಪ್ಲಂಗ್ (ಎನ್‌ಎಸ್‌ಸಿಎನ್–ಕೆ) ಉಗ್ರಗಾಮಿ ಸಂಘಟನೆಯನ್ನು ಕೇಂದ್ರ ಸರ್ಕಾರ ಮುಂದಿನ ಐದು ವರ್ಷಗಳ ಅವಧಿಗೆ ನಿಷೇಧಿಸಿದೆ. ಎನ್‌ಎಸ್‌ಸಿಎನ್ ಮುಖ್ಯಸ್ಥ ಎಸ್‌ಎಸ್ ಖಪ್ಲಂಗ್ ಮತ್ತು ಎನ್‌ಎಸ್‌ಸಿಎನ್ (ಕೆ) ಸೇನಾ ಕಮಾಂಡರ್ ನಿಕಿ ಸುಮಿ ಬಂಧನಕ್ಕೆ ನೆರವಾಗುವಂತಹ ಮಾಹಿತಿ ನೀಡಿದವರಿಗೆ ಕ್ರಮವಾಗಿ 7 ಮತ್ತು 10 ಲಕ್ಷ ರೂಪಾಯಿಗಳ ಬಹುಮಾನ ನೀಡಲಾಗುವುದು ಎಂದು ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) ಇತ್ತೀಚೆಗೆ ಪ್ರಕಟಿಸಿದೆ. ಜೂನ್ 4ರಂದು ಮಣಿಪುರದಲ್ಲಿ ಡೋಗ್ರಾ ಸೇನಾ ತುಕಡಿ ಮೇಲೆ ದಾಳಿ ನಡೆಸಿದ್ದ ಎನ್‌ಎಸ್‌ಸಿಎನ್ (ಕೆ) ಉಗ್ರರು 18 ಮಂದಿ ಸೇನಾ ಸಿಬ್ಬಂದಿಯನ್ನು ಹತ್ಯೆಗೈಯ್ದಿದ್ದರು.**




ಮಾಜಿ ಪ್ರಧಾನಿಗಳಾದ ಇಂದಿರಾ ಗಾಂಧಿ ಮತ್ತು ರಾಜೀವ್ ಗಾಂಧಿ ಅವರಿಗೆ ಅಂಚೆ ಚೀಟಿಗಳಿಂದ ಕೊಕ್ ನೀಡಲಾಗಿದೆ. ಅವರ ಚಿತ್ರಗಳಿದ್ದ ಅಂಚೆ ಚೀಟಿಗಳನ್ನು ಮುಂದುವರಿಸದಿರಲು ಕೇಂದ್ರ ಸರ್ಕಾರ ನಿರ್ಧರಿಸಿದೆ. ಅಂಚೆ ಇಲಾಖೆಯು 2008ರಲ್ಲಿ 'ಆಧುನಿಕ ಭಾರತದ ನಿರ್ಮಾತೃಗಳು' ಶೀರ್ಷಿಕೆಯ ಸರಣಿ ಆರಂಭಿಸಿ 9 ಮಂದಿ ಖ್ಯಾತ ವ್ಯಕ್ತಿಗಳ ಅಂಚೆ ಚೀಟಿಗಳನ್ನು ಬಿಡುಗಡೆ ಮಾಡಿತ್ತು. ಈ ಸರಣಿಯಲ್ಲಿ ಬಿಡುಗಡೆಯಾದ ರಾಜೀವ್ ಮತ್ತು ಇಂದಿರಾ ಗಾಂಧಿ ಚಿತ್ರಗಳಿದ್ದ ಅಂಚೆ ಚೀಟಿಗಳಿಗೆ 5 ರೂಪಾಯಿ ಮುಖಬೆಲೆ ವಿಧಿಸಲಾಗಿತ್ತು. ಈ ಅಂಚೆ ಚೀಟಿಗಳ ಪೈಕಿ ರಾಜೀವ್ ಗಾಂಧಿ ಮತ್ತು ಇಂದಿರಾ ಗಾಂಧಿ ಚಿತ್ರಗಳಿದ್ದ ಅಂಚೆ ಚೀಟಿಗಳ ಮುಂದುವರಿಕೆಯನ್ನು 2015ರ ಜುಲೈಯಿಂದ ಹಾಲಿ ಸರ್ಕಾರವು ಸ್ಥಗಿತಗೊಳಿಸಿದೆ. ಆಧುನಿಕ ಭಾರತದ ನಿರ್ಮಾತೃಗಳು ಸರಣಿಯಲ್ಲಿ ಜವಾಹರಲಾಲ್ ನೆಹರೂ, ಮಹಾತ್ಮಾ ಗಾಂಧಿ, ಬಿ.ಆರ್. ಅಂಬೇಡ್ಕರ್, ಸತ್ಯಜಿತ್ ರೇ, ಹೋಮಿ ಜಹಾಂಗೀರ್ ಭಾಭಾ, ಜೆಆರ್‌ಡಿ ಟಾಟಾ ಮತ್ತು ಮದರ್ ತೆರೇಸಾ ಅವರನ್ನೂ ಸೇರಿಸಲಾಗಿತ್ತು. ಇಂದಿರಾ ಗಾಂಧಿ ಅವರ ಚಿತ್ರದ ಬದಲಿಗೆ ಯೋಗದ ಚಿತ್ರಗಳನ್ನು ಇನ್‌ಲ್ಯಾಂಡ್ ಲೆಟರ್‌ಗಳಲ್ಲಿ (ಅಂತರ್ದೇಶೀಯ ಪತ್ರ) ಬಳಸಲು ಸಲಹಾ ಸಮಿತಿ ನೀಡಿದ ಸಲಹೆಯನ್ನು ಸ್ವೀಕರಿಸಿದ ಕೇಂದ್ರ ಸರ್ಕಾರ ಅವುಗಳನ್ನು ಮುಂದುವರಿಸದಿರಲು ನಿರ್ಧರಿಸಿದೆ. ಬದಲಿಗೆ ಶ್ಯಾಮ್ ಪ್ರಸಾದ್ ಮುಖರ್ಜಿ, ಯೋಗ ಮತ್ತು ದೀನದಯಾಳ್ ಉಪಾಧ್ಯಾಯ ಅವರ ಚಿತ್ರಗಳನ್ನು ಬಳಸಲಾಗುತ್ತಿದೆ.

## ಸಾಲುದ್ದದ ಸುದ್ದಿಗಳು



**ಇಸ್ರೋವಿನ ಸಾಮಾಜಿಕ ಸೇವೆಯನ್ನು ಗುರುತಿಸಿ ಸಂಸ್ಥೆಗೆ ಗಾಂಧಿ ಶಾಂತಿ ಪ್ರಶಸ್ತಿ 2014ನ್ನು ರಾಷ್ಟ್ರಪತಿ ಪ್ರಣಬ್ ಮುಖರ್ಜಿ ಅವರು ಪ್ರದಾನ ಮಾಡಿದರು. ಇಸ್ರೋದ ಅಧ್ಯಕ್ಷ ಎ.ಎಸ್. ಕಿರಣ್ ಕುಮಾರ್ ಗಾಂಧಿ ಶಾಂತಿ ಪ್ರಶಸ್ತಿ ಮತ್ತು 1 ಕೋಟಿ ರೂ. ಪ್ರಶಸ್ತಿ ಪತ್ರವನ್ನು ರಾಷ್ಟ್ರಪತಿಯವರಿಂದ ಸ್ವೀಕರಿಸಿದರು. ಅತ್ಯಲ್ಪ ಸಂಪನ್ಮೂಲ, ಕಡಿಮೆ ತಾಂತ್ರಿಕ ತಜ್ಞರ ಬಲ ಮತ್ತು ಮೂಲಸೌಕರ್ಯಗಳ ಕೊರತೆ ಇದ್ದರೂ ಸಹ ಇಸ್ರೋ ಬಾಹ್ಯಾಕಾಶ ರಂಗದಲ್ಲಿ ಮಹತ್ವದ ಸಾಧನೆ ಮಾಡಿ ಜಾಗತಿಕ ಮಟ್ಟದಲ್ಲಿ ಗುರುತಿಸಿಕೊಂಡಿದೆ. ದೇಶೀಯವಾಗಿ ಬಾಹ್ಯಾಕಾಶ ತಂತ್ರಜ್ಞಾನಗಳನ್ನು ಅಭಿವೃದ್ಧಿ ಪಡಿಸುತ್ತಿದೆ. ಒಂದು ಸಣ್ಣ ಬಾಹ್ಯಾಕಾಶ ಸಂಸ್ಥೆಯಾಗಿ ಸ್ಥಾಪನೆಯಾದ ಇಸ್ರೋ ಇಂದು ಪ್ರಪಂಚದ 6ನೇ ಅತಿದೊಡ್ಡ ಬಾಹ್ಯಾಕಾಶ ಸಂಸ್ಥೆಯಾಗಿ ಬೆಳೆದಿದೆ. 2014ರ ಸೆಪ್ಟಂಬರ್ 24ರಂದು ಮಂಗಳ ಗ್ರಹಕ್ಕೆ ಯಶಸ್ವಿಯಾಗಿ ನೌಕೆಯನ್ನು ಕಳುಹಿಸುವ ಮೂಲಕ ಮಹತ್ವದ ಸಾಧನೆ ಮಾಡಿದೆ. ಮೊದಲ ಯತ್ನದಲ್ಲೇ ಮಂಗಳಕ್ಕೆ ನೌಕೆ ಕಳುಹಿಸಿದ ನಾಲ್ಕನೇ ಬಾಹ್ಯಾಕಾಶ ಸಂಸ್ಥೆ ಎಂಬ ಗೌರವಕ್ಕೆ ಇಸ್ರೋ ಪಾತ್ರವಾಗಿದೆ. ಇದು ದೇಶಕ್ಕೆ ಹೆಮ್ಮೆ ತರುವ ಕೆಲಸ. ಇಸ್ರೋ ಜನಸ್ನೇಹಿ ಕಾರ್ಯಕ್ರಮಗಳನ್ನು ರೂಪಿಸುತ್ತಿದ್ದು, ನೀರು ಮತ್ತು ಆಹಾರ ಭದ್ರತೆ, ಸುಸ್ಥಿರ ಪರಿಸರ ಯೋಜನೆಗಳು, ಗ್ರಾಮೀಣಾಭಿವೃದ್ಧಿ, ಶಿಕ್ಷಣ, ಆರೋಗ್ಯ, ಸಂಪನ್ಮೂಲಗಳ ಸಂರಕ್ಷಣೆ, ಪ್ರಾಕೃತಿಕ ವಿಕೋಪಗಳ ನಿರ್ವಹಣೆಯಲ್ಲಿ ಮಹತ್ವದ ಪಾತ್ರ ವಹಿಸುತ್ತಿದೆ ಎಂದು ಪ್ರಣಬ್ ಇಸ್ರೋದ ಸಾಧನೆಗಳನ್ನು ಹೊಗಳಿದರು.**



ಭಾರತದ ಮಹತ್ವಾಕಾಂಕ್ಷಿ ಸಾರ್ಕ್ ಉಪಗ್ರಹ ಯೋಜನೆಗೆ ಶ್ರೀಲಂಕಾ ಸಮ್ಮತಿ ಸೂಚಿಸಿದ್ದು, ಇದು ಉಪಗ್ರಹ ಉಡಾವಣೆಗೆ ಅಂತಾರಾಷ್ಟ್ರೀಯ ದೂರಸಂಪರ್ಕ ಸಂಘಟನೆಯ ಒಪ್ಪಿಗೆ ಪಡೆಯಲು ಅನುಕೂಲವಾಗಲಿದೆ ಎಂದು ಇಸ್ರೋ ತಿಳಿಸಿದೆ. ಭಾರತವು ಸಾರ್ಕ್ ರಾಷ್ಟ್ರಗಳಿಗಾಗಿ ಒಂದು ಉಪಗ್ರಹವನ್ನು ಅಭಿವೃದ್ಧಿಪಡಿಸುತ್ತಿದೆ. ಕಳೆದ ಜೂನ್‌ನಲ್ಲಿ ನಡೆದ ಸಭೆಯಲ್ಲಿ ಉಪಗ್ರಹ ಉಡಾವಣೆಗೆ ಎಲ್ಲಾ ರಾಷ್ಟ್ರಗಳು ಒಪ್ಪಿಗೆ ಸೂಚಿಸಿದ್ದವು. ಈಗ ಎಲ್ಲಾ ರಾಷ್ಟ್ರಗಳು ಅಧಿಕೃತವಾಗಿ ಸಮ್ಮತಿ ಸೂಚಿಸಬೇಕಿದೆ. ಶ್ರೀಲಂಕಾ ಸಮ್ಮತಿ ಸೂಚಿಸಿದ್ದು, ಉಳಿದಂತೆ ಪಾಕಿಸ್ತಾನ, ಅಫ್ಘಾನಿಸ್ತಾನ, ಮಾಲ್ಡೀವ್ಸ್, ನೇಪಾಳ, ಬಾಂಗ್ಲಾದೇಶ ಮತ್ತು ಭೂತಾನ್ ರಾಷ್ಟ್ರಗಳು ಸಮ್ಮತಿ ಸೂಚಿಸಬೇಕಿದೆ. ಇದೇ ಸಂದರ್ಭದಲ್ಲಿ ಭಾರತವು ವಿಯೆಟ್ನಾಂ ಮತ್ತು ಫಿಜಿ ದೇಶಗಳಲ್ಲಿ ಅಂತರಿಕ್ಷ ಅಧ್ಯಯನ ಕೇಂದ್ರಗಳನ್ನು ಸ್ಥಾಪಿಸಲಿವೆ ಎಂದು ಇಸ್ರೋದ ಅಧ್ಯಕ್ಷ ಮತ್ತು ಅಂತರಿಕ್ಷ ಇಲಾಖೆ ಕಾರ್ಯದರ್ಶಿ ಕಿರಣ್ ಕುಮಾರ್ ತಿಳಿಸಿದ್ದಾರೆ.



**ಅಪಾರ ಪ್ರಮಾಣದಲ್ಲಿ ನಕಲಿ ನೋಟುಗಳನ್ನು ಭಾರತದಲ್ಲಿ ಚಲಾವಣೆಗೆ ತರುವ ಮೂಲಕ ಆರ್ಥಿಕ ವ್ಯವಸ್ಥೆಗೆ ಪೆಟ್ಟು ನೀಡಲು ಯತ್ನಿಸುತ್ತಿರುವ ಪಾಕಿಸ್ತಾನ ಈಗ ತನ್ನ ಜಾಲವನ್ನು ಇತರ ದೇಶಗಳಿಗೂ ವಿಸ್ತರಿಸಿಕೊಳ್ಳುತ್ತಿರುವುದು ಬೆಳಕಿಗೆ ಬಂದಿದೆ. ಪಾಕಿಸ್ತಾನ ಪ್ರತಿ ವರ್ಷ ಸುಮಾರು 10 ಸಾವಿರ ಕೋಟಿ ರೂ. ಮುಖಬೆಲೆಯ ನಕಲಿ ನೋಟುಗಳನ್ನು ಭಾರತಕ್ಕೆ ವಿವಿಧ ಮಾರ್ಗಗಳಿಂದ ಅಕ್ರಮವಾಗಿ ಕಳಿಸುತ್ತಿದೆ ಎನ್ನಲಾಗಿದೆ. ಕೇಂದ್ರ ಸರ್ಕಾರ ಕೈಗೊಂಡಿರುವ ಕಠಿಣ ಕ್ರಮಗಳ ಕಾರಣ ಈಗ ಪಾಕಿಸ್ತಾನದಿಂದ ಭಾರತಕ್ಕೆ ನೇರವಾಗಿ ನಕಲಿ ನೋಟು ಸಾಗಾಣಿಕೆ ಅಸಾಧ್ಯವಾಗಿದೆ. ಹೀಗಾಗಿ ನೆರೆಯ ರಾಷ್ಟ್ರಗಳಾದ ಶ್ರೀಲಂಕಾ, ಬಾಂಗ್ಲಾದೇಶ, ಚೀನಾ, ನೇಪಾಳ, ಥಾಯ್ಲೆಂಡ್‌ಗಳ ಮೂಲಕ ಪಾಕಿಸ್ತಾನವು ಭಾರತಕ್ಕೆ ನಕಲಿ ನೋಟುಗಳನ್ನು ಅಕ್ರಮವಾಗಿ ಕಳಿಸುತ್ತಿದೆ ಎಂಬ ವಿಚಾರವನ್ನು ಗುಪ್ತಚರ ಸಂಸ್ಥೆ ರಾ ಬಯಲಿಗೆಳೆದಿದೆ. ಲಕ್ಷಾಂತರ ರೂ. ಮುಖ ಬೆಲೆಯ ನಕಲಿ ನೋಟುಗಳನ್ನು ಹೊಂದಿದ್ದ ಕೊರಿಯರ್ ಒಂದು ಇತ್ತೀಚೆಗೆ ರಾ ಅಧಿಕಾರಿಗಳ ಕೈಗೆ ಸಿಕ್ಕಿತ್ತು. ಮೊದಲು ಈ ಕೊರಿಯರ್ ಪಾಕಿಸ್ತಾನದಿಂದ ಚೀನಾಕ್ಕೆ ಕಳಿಸಲಾಗಿದ್ದು, ಅಲ್ಲಿಂದ ಭಾರತಕ್ಕೆ ರವಾನೆಯಾಗಿರುವುದು ತನಿಖೆಯಿಂದ ತಿಳಿದು ಬಂದಿದೆ. ಪಾಕ್‌ನ ಐಎಸ್‌ಐ ಬೆಂಬಲಿತ ಹಲವು ಸಂಸ್ಥೆಗಳು ಭಾರತಕ್ಕೆ ನೇರವಾಗಿ ನಕಲಿ ನೋಟುಗಳನ್ನು ಕಳಿಸುವ ಬದಲು ನೆರೆಯ ದೇಶಗಳ ಮೂಲಕ ರವಾನಿಸುತ್ತಿರುವುದು ಇದರಿಂದ ದೃಢಪಟ್ಟಿದೆ.**

1987ರಲ್ಲಿ ಬೋಫೋರ್ಸ್ ಫಿರಂಗಿ ಹಗರಣದ ನಂತರ ದೇಶೀಯವಾಗಿ ಫಿರಂಗಿ ಅಭಿವೃದ್ಧಿ ಪಡಿಸಲು ಆಸಕ್ತಿ ತೋರಿದ ಭಾರತೀಯ ಸೇನೆ 'ಧನುಷ್' ಎಂಬ ಫಿರಂಗಿಯನ್ನು ಅಭಿವೃದ್ಧಿಪಡಿಸಿದ್ದು ಇದು ಶೀಘ್ರ ಸೇನೆಗೆ ಸೇರ್ಪಡೆಯಾಗಲಿದೆ. ಧನುಷ್ ಅಥವಾ 'ದೇಸಿ ಬೋಫೋರ್ಸ್' ಎಂದು ಕರೆಯಲ್ಪಡುವ ಇದು 155 ಎಂಎಂ ಫಿರಂಗಿಯಾಗಿದ್ದು, ಅತ್ಯಾಧುನಿಕ ಸೌಲಭ್ಯಗಳನ್ನು ಹೊಂದಿದೆ. ಈ ಫಿರಂಗಿಯು 38 ಕಿ.ಮೀ. ದೂರದ ಗುರಿಯನ್ನು ಯಶಸ್ವಿಯಾಗಿ ಮುಟ್ಟುವ ಸಾಮರ್ಥ್ಯ ಹೊಂದಿದೆ. ಹಲವು ದೇಶಗಳಲ್ಲಿ ಉಪಯೋಗಿಸುತ್ತಿರುವ ಅತ್ಯಾಧುನಿಕ ಫಿರಂಗಿಗಳು ಹೊಂದಿರುವ ಸೌಲಭ್ಯ ಮತ್ತು ಸಾಮರ್ಥ್ಯವನ್ನು ಹೊಂದಿದೆ. ತಲಾ ಒಂದು ಫಿರಂಗಿಗೆ 14 ಕೋಟಿ ರೂ. ಬೆಲೆ ಇದೆ. ಬೋಫೋರ್ಸ್ 27 ಕಿ.ಮೀ. ದೂರದ ಗುರಿ ಮುಟ್ಟುವ ಸಾಮರ್ಥ್ಯ ಹೊಂದಿತ್ತು, ಅದಕ್ಕಿಂಲೂ 11 ಕಿ.ಮೀ. ಹೆಚ್ಚು ದೂರದ ಗುರಿ ಮುಟ್ಟುವ ಸಾಮರ್ಥ್ಯ ಧನುಷ್‌ಗೆ ಇದೆ. ಸೇನೆಯು ಒಟ್ಟು 114 ಧನುಷ್ ಫಿರಂಗಿಗಳನ್ನು ಖರೀದಿಸಲು ಆಸಕ್ತಿ ತೋರಿದೆ.





## 6 ತಿಂಗಳಲ್ಲಿ 50 ಸಾವಿರ ಕಿ.ಮೀ. ರಾಷ್ಟ್ರೀಯ ಹೆದ್ದಾರಿ

ದೇಶಾದ್ಯಂತ ರಾಷ್ಟ್ರೀಯ ಹೆದ್ದಾರಿ ಜಾಲವನ್ನು ಶೀಘ್ರಗತಿಯಲ್ಲಿ ವಿಸ್ತರಿಸಲು ಕ್ರಮಕೈಗೊಂಡಿರುವ ಕೇಂದ್ರ ಸರ್ಕಾರ ಮುಂದಿನ 6 ತಿಂಗಳಲ್ಲಿ 50 ಸಾವಿರ ಕಿ.ಮೀ.ನಷ್ಟು ಹೆದ್ದಾರಿಗಳನ್ನು ನಿರ್ಮಿಸುವುದಾಗಿ ತಿಳಿಸಿದೆ. ಇದು ಸಂಪೂರ್ಣವಾಗಿ ಜಾರಿಗೆ ಬಂದಲ್ಲಿ, ಹಿಂದಿನ ಯುಪಿಎ ಸರ್ಕಾರದ 10 ವರ್ಷಗಳಲ್ಲಿ ನಿರ್ಮಿಸಿದ ಹೆದ್ದಾರಿಗಿಂತ ನರೇಂದ್ರ ಮೋದಿ ಸರ್ಕಾರ ಮೂರು ಪಟ್ಟು ಹೆಚ್ಚು ಪ್ರಮಾಣದಲ್ಲಿ ಹೆದ್ದಾರಿಗಳನ್ನು ನಿರ್ಮಿಸಿದಂತಾಗುತ್ತದೆ. ಅಲ್ಲದೆ ಇದು ವಾಜಪೇಯಿ ನೇತೃತ್ವದ ಎನ್‌ಡಿಎ–1 ಸರ್ಕಾರಕ್ಕಿಂತ ಎರಡು ಪಟ್ಟು ಹೆಚ್ಚಾಗಿದೆ. ನರೇಂದ್ರ ಮೋದಿ ಸರ್ಕಾರ ಬಂದ ನಂತರ ಈವರೆಗೆ 7 ಸಾವಿರ ಕಿ.ಮೀ.ನಷ್ಟು ರಾಷ್ಟ್ರೀಯ ಹೆದ್ದಾರಿ ನಿರ್ಮಿಸಲಾಗಿದೆ. ಇದರಿಂದ ದೇಶದಲ್ಲಿನ ಒಟ್ಟು ರಾಷ್ಟ್ರೀಯ ಹೆದ್ದಾರಿಗಳ ಉದ್ದ ಒಂದು ಲಕ್ಷ ಕಿ.ಮೀ. ಗಿಂತ ಹೆಚ್ಚಾಗಿದೆ. ವರ್ಷದ ಅಂತ್ಯಕ್ಕೆ ಇದನ್ನು 1.5 ಲಕ್ಷ ಕಿ.ಮೀ.ಗೆ ಹೆಚ್ಚಿಸಲಾಗುವುದು ಎಂದು ಕೇಂದ್ರ ರಸ್ತೆ ಸಾರಿಗೆ ಸಚಿವ ನಿತಿನ್ ಗಡ್ಕರಿ ತಿಳಿಸಿದ್ದಾರೆ.

**ಹೆದ್ದಾರಿ ಸಂಪರ್ಕಕ್ಕೆ ಭಾರತ್‌ವಾಲಾ:** ಇನ್ನೂ ರಸ್ತೆ ಸಂಪರ್ಕವನ್ನೇ ಕಾಣದ ಹಲವು ಪ್ರದೇಶಗಳು ಭಾರತದಲ್ಲಿವೆ. ಇಂಥ ಹಿಂದುಳಿದ ಪ್ರದೇಶಗಳನ್ನು ರಾಷ್ಟ್ರೀಯ ಹೆದ್ದಾರಿಯೊಂದಿಗೆ ಸಂಪರ್ಕಿಸಲು ಕೇಂದ್ರ ಸರ್ಕಾರ 'ಭಾರತ್ ಮಾಲಾ' ಎಂಬ ಯೋಜನೆ ಜಾರಿಗೊಳಿಸಲು ಮುಂದಾಗಿದೆ. ಈ ಯೋಜನೆಯ ಕಾರ್ಯಸಾಧ್ಯತೆಗಳ ಕುರಿತು ಅಧಿಕಾರಿಗಳ ಹಂತದಲ್ಲಿ ಪರಿಶೀಲನೆ ನಡೆಯುತ್ತಿದೆ. ಭಾರತ್‌ವಾಲಾ ಯೋಜನೆ ಅಡಿ ಸುಮಾರು 15 ಸಾವಿರ ಕಿ.ಮೀ. ರಸ್ತೆ ನಿರ್ಮಿಸುವ ಕುರಿತು ಸದ್ಯದಲ್ಲೇ ಅಧಿಸೂಚನೆ ಹೊರಡಿಸಲಿದೆ. ವಿವಿಧ ರಾಜ್ಯಗಳಲ್ಲಿ ಹಾದುಹೋಗುವ 20 ಸಾವಿರ ಕಿ.ಮೀ. ರಸ್ತೆಯನ್ನು ರಾಷ್ಟ್ರೀಯ ಹೆದ್ದಾರಿಯಾಗಿ ಮೇಲ್ದರ್ಜೆಗೇರಿಸುವ ಕುರಿತೂ ಕೇಂದ್ರ ಸರ್ಕಾರ ಗಂಭೀರ ಚಿಂತನೆ ನಡೆಸುತ್ತಿದೆ ಎಂದು ಮೂಲಗಳು ತಿಳಿಸಿವೆ.

पुंगव PUNGAVA
# 74, Ranga Rao Road,
Shankarapuram, Bangalore - 560 004.
website : www.samvada.org
ತ್ರೈವಾರ್ಷಿಕ ಚಂದಾ : ರೂ. 150.00

REGISTERED NEWS PAPER RNI 36528/79 LICENCED TO POST WITHOUT PREPAYMENT-WPP46 AT BENGALURU PSO, BG-560 026 on 10/25 of every Month REG.NO.CPMG/KA/BGS/102/2015-17
1-10-2015



# 'ತಪಸ್': ಅರ್ಜಿ ಅಹ್ವಾನ

'ತಪಸ್' – ಕರ್ನಾಟಕದ ಗ್ರಾಮಾಂತರ ಪ್ರದೇಶಗಳಲ್ಲಿ ಆರ್ಥಿಕವಾಗಿ ಹಿಂದುಳಿದಿರುವ ಸುಮಾರು 30–40 ಪ್ರತಿಭಾವಂತ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಿಕೊಂಡು ಅವರಿಗೆ ಉಚಿತವಾಗಿ ಪಿ.ಯು. ಶಿಕ್ಷಣ ಮತ್ತು IIT ಪ್ರವೇಶ ಪರೀಕ್ಷೆಗೆ ತರಬೇತಿಯನ್ನು ನೀಡುತ್ತದೆ. ಅಲ್ಲದೆ ಉಚಿತ ಊಟ ಮತ್ತು ವಸತಿಯನ್ನು ವಿದ್ಯಾರ್ಥಿ ನಿಲಯದಲ್ಲಿ ಕಲ್ಪಿಸುತ್ತದೆ.

**ಉಚಿತ ವಿದ್ಯಾರ್ಥಿನಿಲಯ:** ಕ್ಷೇಮಕರ, ಸ್ವಚ್ಛ ಮತ್ತು ಆರೋಗ್ಯದಾಯಕ ಸಸ್ಯಾಹಾರಿ ಆಹಾರವನ್ನು ಉಚಿತವಾಗಿ ಒದಗಿಸಲಾಗುತ್ತದೆ.

**ಸೌಕರ್ಯ:** ತರಗತಿಗಳು, ಪ್ರಯೋಗಾಲಯಗಳು ಮತ್ತು ಸುಸಜ್ಜಿತ ಗ್ರಂಥಾಲಯ ಉತ್ತಮವಾಗಿ ವಿನ್ಯಾಸಗೊಂಡಿದೆ ಮತ್ತು ಕಠಿಣ ಪರಿಶ್ರಮದಿಂದ ಶ್ರೇಷ್ಠರೆನಿಸಲು ಸ್ಫೂರ್ತಿ ನೀಡುವಂತಿದೆ.

ಆಯ್ಕೆಯಾದ ವಿದ್ಯಾರ್ಥಿಗಳಿಗೆ ಬೆಂಗಳೂರಿನಲ್ಲಿರುವ ರಾಷ್ಟ್ರೋತ್ಥಾನ ಪದವಿಪೂರ್ವ ಕಾಲೇಜಿನಲ್ಲಿ ಪ್ರವೇಶ ಒದಗಿಸಲಾಗುವುದು. ರಾಷ್ಟ್ರೋತ್ಥಾನ ಪದವಿಪೂರ್ವ ಕಾಲೇಜಿನ ಮತ್ತು ಬೇಸ್‌ನ ನುರಿತ ಉಪನ್ಯಾಸಕರುಗಳು ತರಬೇತಿ ನೀಡುತ್ತಾರೆ. ಈ ವಿದ್ಯಾರ್ಥಿಗಳಿಗೆ IIT ಪ್ರವೇಶ ಪರೀಕ್ಷೆಯ ತಯಾರಿ ನಡೆಸಲು ತರಬೇತಿ ನೀಡುವುದರ ಮೂಲಕ ಬೇಸ್ ಸಹಕರಿಸುತ್ತದೆ.

### ಅರ್ಹತೆಗಳು

- ಪ್ರಸ್ತುತ ಸಾಲಿನಲ್ಲಿ ಎಸ್.ಎಸ್.ಎಲ್.ಸಿ./10ನೇತರಗತಿಯ ಪರೀಕ್ಷೆಯನ್ನು ಬರೆಯುವವರಾಗಿರಬೇಕು.
- 9ನೇ ತರಗತಿಯ ಪರೀಕ್ಷೆಗಳಲ್ಲಿ ಕನಿಷ್ಠ 80% ಅಂಕಗಳನ್ನು ಪಡೆದಿರಬೇಕು.
- ಪೋಷಕರ ವಾರ್ಷಿಕ ವರಮಾನ ರೂ. 1,50,000 (ಒಂದು ಲಕ್ಷ ಐವತ್ತು ಸಾವಿರ) ಮೀರಿರಬಾರದು.
- ಆಯ್ಕೆಯಾದರೆ ವಿದ್ಯಾರ್ಥಿಗಳು ವಿದ್ಯಾರ್ಜನೆಗಾಗಿ ಬೆಂಗಳೂರಿಗೆ ತೆರಳಲು ಸಿದ್ಧರಿರಬೇಕು.
- ತಪಸ್ ಪ್ರಕಲ್ಪ **ಬಾಲಕ ವಿದ್ಯಾರ್ಥಿಗಳಿಗೆ** ಮಾತ್ರ ಸೀಮಿತ.

### ಆಯ್ಕೆ ವಿಧಾನ

- ಆಯ್ಕೆಯನ್ನು ಲಿಖಿತ ಪರೀಕ್ಷೆ ಮತ್ತು ಸಂದರ್ಶನದ ಮೂಲಕ ಮಾಡಲಾಗುವುದು
- ಎಲ್ಲಾ ಜಿಲ್ಲಾ ಕೇಂದ್ರಗಳು ಮತ್ತು ಕೆಲವು ನಗರಗಳಲ್ಲಿ ಏಕಕಾಲದಲ್ಲಿ ಲಿಖಿತ ಪರೀಕ್ಷೆ ನಡೆಸಲಾಗುವುದು.
- ಪರೀಕ್ಷಾ ದಿನಾಂಕ: 25 ಡಿಸೆಂಬರ್
- ಆಯ್ಕೆ ಪರೀಕ್ಷೆಗೆ ಯಾವುದೇ ಶುಲ್ಕವಿರುವುದಿಲ್ಲ.
- ಲಿಖಿತ ಪರೀಕ್ಷೆಯಲ್ಲಿ ಆಯ್ಕೆಯಾದವರಿಗೆ ಮೌಖಿಕ ಸಂದರ್ಶನಕ್ಕೆ ಹಾಜರಾಗಲು ಮಾಹಿತಿ ನೀಡಲಾಗುವುದು.

### ಅರ್ಜಿ ಸಲ್ಲಿಕೆ ಹೇಗೆ?

- ವಿದ್ಯಾರ್ಥಿಯು ಓದುತ್ತಿರುವ ಶಾಲೆಯ ಮುಖ್ಯೋಪಾಧ್ಯಾಯರ ಮೂಲಕ ಅರ್ಜಿ ಸಲ್ಲಿಸಬೇಕು. ಅರ್ಜಿಯನ್ನು ತಪಸ್‌ನ ಅಂತರ್ಜಾಲ ತಾಣ, www.tapasedu.org ಗೆ ಭೇಟಿ ಕೊಟ್ಟು ಡೌನ್‌ಲೋಡ್ ಮಾಡಿಕೊಂಡು ಅವಶ್ಯಕ ವಿವರಗಳನ್ನು ಭರ್ತಿಮಾಡಿ ಮುಖ್ಯೋಪಾಧ್ಯಾಯರ ಸಹಿಪಡೆದು ಪ್ರಕಲ್ಪಕ್ಕೆ ಕಳಿಸುವುದು.
- ಅರ್ಜಿ ಸಲ್ಲಿಸಲು ಕೊನೆ ದಿನಾಂಕ ನವೆಂಬರ್ 30 (ಹೆಚ್ಚಿನ ಮಾಹಿತಿಗಳಿಗೆ ನಮ್ಮ ಅಂತರ್ಜಾಲವನ್ನು ತಪ್ಪದೇ ನೋಡುವುದು)

**ಅರ್ಜಿ ಸಲ್ಲಿಸಬೇಕಾದ ವಿಳಾಸ:**
ಸಂಯೋಜಕರು, 'ತಪಸ್' ಪ್ರಕಲ್ಪ
ರಾಷ್ಟ್ರೋತ್ಥಾನ ಪರಿಷತ್, ಕೇಶವಶಿಲ್ಪ
ಕೆಂಪೇಗೌಡ ನಗರ, ಬೆಂಗಳೂರು – 560 019
ದೂರವಾಣಿ: 080–26612652, 94812 01144

**ಪರೀಕ್ಷಾಕೇಂದ್ರಗಳ ಮಾಹಿತಿಯನ್ನು website ನಲ್ಲಿ ನೀಡಲಾಗುತ್ತದೆ.**

## ಹರ್ಯಾಣ: ಗುಟ್ಕಾ, ಪಾನ್ ಮಸಾಲಾ ನಿಷೇಧ

ಹರ್ಯಾಣದಲ್ಲಿ ಗುಟ್ಕಾ, ಪಾನ್ ಮಸಾಲ ಮತ್ತು ತಂಬಾಕು ಇರುವ ಉತ್ಪನ್ನಗಳ ತಯಾರಿಕೆ ಮತ್ತು ಮಾರಾಟವನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ. ಆರೋಗ್ಯದ ದೃಷ್ಟಿಯಿಂದ ಹರ್ಯಾಣ ರಾಜ್ಯ ಸರ್ಕಾರ ಈ ನಿರ್ಧಾರ ತೆಗೆದುಕೊಂಡಿದೆ ಎಂದು ಆರೋಗ್ಯ ಸಚಿವ ಅನಿಲ್ ವಿಜ ಅವರು ತಿಳಿಸಿದರು. ತಕ್ಷಣದಿಂದಲೇ ಜಾರಿಗೆ ಬರುವಂತೆ ರಾಜ್ಯದಲ್ಲಿ ತಂಬಾಕು ಉತ್ಪನ್ನಗಳ ತಯಾರಿಕೆ ಮತ್ತು ಮಾರಾಟವನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ. ಈ ನಿಷೇಧ ಒಂದು ವರ್ಷದವರೆಗೂ ಜಾರಿಯಲ್ಲಿರಲಿದೆ ಎಂದು ಹರ್ಯಾಣ ಸರ್ಕಾರ ತಿಳಿಸಿದೆ.

# ಶ್ರೀರಾಮ ಜನಿಸಿದ್ದು ಕ್ರಿ.ಪೂ 5114ರಲ್ಲಿ



ರಾಮಾಯಣ, ಮಹಾಭಾರತದ ಸತ್ಯಾಸತ್ಯತೆ ಕುರಿತಂತೆ ಇತಿಹಾಸಕಾರರ ನಡುವೆ ಜಿಜ್ಞಾಸೆ ಮುಂದುವರಿದಿರುವ ನಡುವೆಯೇ ರಾಮಾಯಣವೂ ಸತ್ಯ, ಶ್ರೀ ರಾಮಚಂದ್ರನಿದ್ದಿದ್ದೂ ಸತ್ಯ ಎಂಬ ಮಹತ್ವದ ಮಾಹಿತಿ ಹೊರಬಿದ್ದಿದೆ. ಕ್ರಿ.ಪೂ. 5114ರ ಜನವರಿ 10ರ 12.05ಕ್ಕೆ ಶ್ರೀರಾಮ ಜನಿಸಿದ ಎಂದು ವೇದಗಳ ವೈಜ್ಞಾನಿಕ ಅಧ್ಯಯನ ಸಂಸ್ಥೆ (ಐ ಸರ್ವ್) ಹೇಳಿದೆ.

ರಾಮಾಯಣ ಕಾಲ್ಪನಿಕವೇ ಅಥವಾ ಐತಿಹಾಸಿಕವೇ? ರಾಮ ನಿಜವಾಗಿಯೂ ಜೀವಿಸಿದ್ದನೇ? ಎಂಬಿತ್ಯಾದಿ ಹತ್ತು ಹಲವು ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳುವ ನಿಟ್ಟಿನಲ್ಲಿ ಮಹತ್ವದ ಪ್ರಯತ್ನ ನಡೆಸಿರುವ ಐ ಸರ್ವ್, ಈ ಕುತೂಹಲಕಾರಿ ಮಾಹಿತಿ ಹೊರಗೆಡವಿದೆ. ದೆಹಲಿಯ ಲಲಿತಕಲಾ ಅಕಾಡೆಮಿಯಲ್ಲಿ ಇತ್ತೀಚೆಗೆ ಏರ್ಪಡಿಸಲಾಗಿರುವ ವಸ್ತು ಪ್ರದರ್ಶನದಲ್ಲಿ ಈ ಸಂಗತಿಯನ್ನು ಅದು ಪ್ರಕಟಿಸಿದೆ.


**ಅಮೆರಿಕ ನೆರವು:** ವೈಜ್ಞಾನಿಕ ಆಧಾರಗಳ ಮೂಲಕವೇ ರಾಮ ಹುಟ್ಟಿದ ದಿನವನ್ನು ನಿಷ್ಕರ್ಷಿಸಲಾಗಿದೆ. ಇದಕ್ಕೆ ಅಮೆರಿಕದಿಂದ ಖರೀದಿಸಿದ ವಿಶೇಷ ಸಾಫ್ಟ್‌ವೇರ್ ಬಳಸಲಾಗಿತ್ತೆಂದು ಐ ಸರ್ವ್ ಮೂಲಗಳು ತಿಳಿಸಿವೆ.

**10,000 ವರ್ಷದ ಇತಿಹಾಸ:** ಹಿಂದುಗಳ ಇತಿಹಾಸ 10,000 ವರ್ಷಗಳಿಗಿಂತಲೂ ಹಿಂದಿನದ್ದು. ಮುಸ್ಲಿಮರು ಹಾಗೂ ಕ್ರೈಸ್ತರ ಆಗಮನಕ್ಕಿಂತಲೂ ಮೊದಲಿನದು ಹಾಗೂ ಪ್ರಾಚೀನವಾದುದು. ಗ್ರಹಗಳ ಉಗಮಕ್ಕೆ ಸಂಬಂಧಿಸಿ ರಾಮಾಯಣ, ಮಹಾಭಾರತಗಳಲ್ಲಿ ಉಲ್ಲೇಖಿಸಲ್ಪಟ್ಟಿರುವ ವಿಚಾರಗಳು ವಾಸ್ತವಕ್ಕೆ ಹತ್ತಿರವಾಗಿವೆ. ಈ ಕೃತಿಗಳು ಐತಿಹಾಸಿಕ ದಾಖಲೆಗಳು ಎಂಬುದು ಐ ಸರ್ವ್ ನಿರ್ದೇಶಕ ಸರೋಜ್ ಬಾಲಾ ಅವರ ಅನಿಸಿಕೆ.

**ಮಹಾಭಾರತವೂ ಅನಾವರಣ:** ಮಹಾಭಾರತ ಯುದ್ಧ ಕ್ರಿ.ಪೂ. 3139ರ ಅ. 13ರಂದು ಆರಂಭವಾಗಿತ್ತು. ಕ್ರಿ.ಪೂ. 5076ರ ಸೆ. 12ರಂದು ಲಂಕೆಯ ಅಶೋಕವನದಲ್ಲಿ ಹನುಮಂತ ಸೀತೆಯನ್ನು ಭೇಟಿಯಾಗಿದ್ದ, ಆ ಸಂದರ್ಭದಲ್ಲಿ ಚಂದ್ರಗ್ರಹಣ ಸಂಭವಿಸಿತ್ತು – ಇವು ಈ ವರದಿಯಲ್ಲಿರುವ ಮತ್ತಿತರ ಕುತೂಹಲಕಾರಿ ಅಂಶಗಳು. ಇದಕ್ಕೆ ಸಂಬಂಧಿಸಿದ ನಕ್ಷೆಗಳನ್ನೂ ವಸ್ತುಪ್ರದರ್ಶನದಲ್ಲಿ ಇರಿಸಲಾಗಿದೆ. ಕೌರವರೊಂದಿಗಿನ ಜೂಜಿನಲ್ಲಿ ಸೋತ ಪಾಂಡವರು ವನವಾಸಕ್ಕೆ ತೆರಳಿದ್ದ ವೇಳೆ ಸೂರ್ಯಗ್ರಹಣ ಸಂಭವಿಸಿತ್ತೆಂದೂ ನಕ್ಷೆಗಳಲ್ಲಿ ಉಲ್ಲೇಖವಾಗಿದೆ. ರಾಮನಿಗಿಂತ ಮೊದಲು ಅಯೋಧ್ಯೆಯಲ್ಲಿ ಆಡಳಿತ ನಡೆಸಿದ್ದ 63 ಹಾಗೂ ನಂತರ ಆಡಳಿತ ನಡೆಸಿದ್ದ 59 ರಾಜರ ಬಗ್ಗೆಯೂ ಮಾಹಿತಿ ಪ್ರದರ್ಶಿಸಲಾಗಿದೆ. (ಕೃಪೆ: ವಿಜಯವಾಣಿ)

## ಪಾಕ್ ಆಕ್ರಮಿತ ಕಾಶ್ಮೀರ ಹಿಂಪಡೆಯುವುದೇ ಭಾರತದ ಗುರಿ

ಪಾಕಿಸ್ತಾನವು ಅಕ್ರಮವಾಗಿ ಆಕ್ರಮಿಸಿ ಕೊಂಡಿರುವ ಜಮ್ಮು–ಕಾಶ್ಮೀರದ ಅವಿಭಾಜ್ಯ ಅಂಗವಾದ ಪಾಕ್ ಆಕ್ರಮಿತ ಕಾಶ್ಮೀರವನ್ನು ಹಿಂದಕ್ಕೆ ಪಡೆಯುವುದೇ ಭಾರತದ ಗುರಿ ಎಂದು ಕೇಂದ್ರ ಸರ್ಕಾರ ತಿಳಿಸಿದೆ.




ಪಾಕ್ ಸೇನಾ ಮುಖ್ಯಸ್ಥ ರಹೀಲ್ ಶರೀಫ್ ಕಾಶ್ಮೀರ ವಿಚಾರ ಇನ್ನೂ ಮುಕ್ತಾಯವಾಗಿಲ್ಲ, ಅದರ ಕುರಿತು ಇನ್ನೂ ಚರ್ಚೆ ನಡೆಯಬೇಕು ಎಂದು ತಿಳಿಸಿದ್ದರು. ಇದಕ್ಕೆ ಪ್ರತಿಕ್ರಿಯಿಸಿರುವ ಜಿತೇಂದ್ರ ಸಿಂಗ್ ಜಮ್ಮು ಮತ್ತು ಕಾಶ್ಮೀರ ಭಾರತದ ಅವಿಭಾಜ್ಯ ಅಂಗವಾಗಿತ್ತು ಮತ್ತು ಮುಂದೆಯೂ ಇರಲಿದೆ. 65–66 ವರ್ಷಗಳ ಹಿಂದೆ ದೇಶದ ಅವಿಭಾಜ್ಯ ಅಂಗವಾಗಿದ್ದ ಜಮ್ಮು ಮತ್ತು ಕಾಶ್ಮೀರದ ಸ್ವಲ್ಪ ಭಾಗವನ್ನು ಪಾಕಿಸ್ತಾನ ಅಕ್ರಮವಾಗಿ ಹಿಡಿತದಲ್ಲಿಟ್ಟುಕೊಂಡಿದೆ. ಅದನ್ನು ವಾಪಸ್ಸು ಪಡೆಯುವುದು ಭಾರತದ ಮೂಲ ಉದ್ದೇಶ ಎಂದು ಪ್ರಧಾನಿ ಕಾರ್ಯಾಲಯ ರಾಜ್ಯ ಸಚಿವ ಜಿತೇಂದ್ರ ಸಿಂಗ್ ಸ್ಪಷ್ಟಪಡಿಸಿದ್ದಾರೆ.

# ಗೋ ಮಾಂಸ ಮಾರಾಟವನ್ನು ನಿಷೇಧಿಸಿ

ಜಮ್ಮು ಮತ್ತು ಕಾಶ್ಮೀರ ರಾಜ್ಯದಲ್ಲಿ 1862ರಿಂದಲೂ ಜಾರಿಯಲ್ಲಿರುವ ಗೋಹತ್ಯೆ ಹಾಗೂ ಗೋಮಾಂಸ ಮಾರಾಟ ನಿಷೇಧಿಸುವ ಕಾನೂನನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸುವಂತೆ ಜಮ್ಮು ಮತ್ತು ಕಾಶ್ಮೀರ ಹೈಕೋರ್ಟ್ ಅಲ್ಲಿನ ಸರ್ಕಾರಕ್ಕೆ ಸೂಚಿಸಿದೆ.

1862ರಲ್ಲಿ ರಾಜ್ಯವನ್ನು ಆಳುತ್ತಿದ್ದ ಡೋಗ್ರಾ ಮಹಾರಾಜ ರಾಜ್ಯದಲ್ಲಿ ಗೋಹತ್ಯೆ ಮತ್ತು ಮಾಂಸ ಮಾರಾಟವನ್ನು ನಿಷೇಧಿಸುವ ರಣಬೀರ್ ಪೀನಲ್ ಕೋಡ್ (ಆರ್‌ಪಿಸಿ) ಎಂಬ ಕಾನೂನನ್ನು ಜಾರಿಗೊಳಿಸಿದ್ದರು. ಅದೇ ವರ್ಷ ಆರ್‌ಪಿಸಿ ಭಾರತೀಯ ದಂಡ ಸಂಹಿತೆಯಾಗಿ (ಐಪಿಸಿ) ಮಾರ್ಪಾಡುಗೊಂಡಿತು. ಇದರ 298ಬಿ ಪರಿಚ್ಛೇದದ ಪ್ರಕಾರ ಉದ್ದೇಶಪೂರ್ವಕವಾಗಿ ಗೋಹತ್ಯೆ ಮಾಡುವುದು ಅಥವಾ ಈ ಜಾತಿಗೆ ಸೇರಿದ ದನ, ಎತ್ತು ಮತ್ತು ಎಮ್ಮೆಗಳನ್ನು ವಧಿಸುವುದು, ಅವುಗಳ ಮಾಂಸವನ್ನು ಮಾರಾಟ ಮಾಡಲು ಸಂಗ್ರಹಿಸುವುದು ಜಾಮೀನುರಹಿತ ಅಪರಾಧವಾಗಿದೆ. ಈ ಅಪರಾಧ ಎಸಗಿದವರಿಗೆ 10 ವರ್ಷಗಳ ಕಾರಾಗೃಹ ಶಿಕ್ಷೆ ಮತ್ತು ಜುಲ್ಮಾನೆ ವಿಧಿಸಬಹುದಾಗಿದೆ. ಈ ಕಾನೂನು ಇದ್ದಾಗ್ಯೂ ಜಮ್ಮು ಮತ್ತು ಕಾಶ್ಮೀರದಲ್ಲಿ ಇಂದಿಗೂ ಮಾಂಸಕ್ಕಾಗಿ ಗೋಹತ್ಯೆ ಮಾಡಲಾಗುತ್ತಿದೆ. ಇದರಿಂದ ನಿರ್ದಿಷ್ಟ ಕೋಮಿನ ಜನರ ಮನಸ್ಸಿಗೆ ನೋವಾಗುತ್ತಿದೆ. ಆದ್ದರಿಂದ, ಗೋಹತ್ಯೆ ನಿಷೇಧಿಸುವ ಕಾನೂನನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಲು ಜಮ್ಮು–ಕಾಶ್ಮೀರ ಸರ್ಕಾರಕ್ಕೆ ಸೂಚಿಸಬೇಕೆಂದು ಕೋರಿ ವಕೀಲ ಪರಿಮೋಕ್ಷ್ ಸೇಠ್ ಎಂಬುವವರು ಜಮ್ಮು–ಕಾಶ್ಮೀರ ಹೈಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ ದಾಖಲಿಸಿದ್ದರು. ಅರ್ಜಿಯ ವಿಚಾರಣೆ ನಡೆಸಿದ ನ್ಯಾ. ಧೀರಜ್ ಸಿಂಗ್ ಠಾಕೂರ್ ಮತ್ತು ನ್ಯಾ. ಜನಕ್ ರಾಜ್ ಕೊತ್ವಾಲ್ ಅವರನ್ನು ಒಳಗೊಂಡ ವಿಭಾಗೀಯ ಪೀಠ, ಈಗಾಗಲೆ ಜಾರಿಯಲ್ಲಿರುವ ಗೋಹತ್ಯೆ ನಿಷೇಧಿಸುವ ಕಾನೂನನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸುವಂತೆ ಜಮ್ಮು ಮತ್ತು ಕಾಶ್ಮೀರ ಸರ್ಕಾರಕ್ಕೆ ಸೂಚಿಸಿತು.



## ಗೋಮಾಂಸ ಬೇಡ: ಉಲೇಮಾಗಳ ಮನವಿ

ಮುಂಬರುವ ಈದ್ ಉಲ್ ಅಜಾ ಹಬ್ಬದಂದು ದನದ ಮಾಂಸ ಸೇವನೆಮಾಡದಂತೆ ಇಸ್ಲಾಂ ಧರ್ಮ ಗುರುಗಳು ಮುಸ್ಲಿಂ ಸಮುದಾಯಕ್ಕೆ ಮನವಿ ಮಾಡಿದ್ದಾರೆ. ಸಮುದಾಯದ ಹಿತದೃಷ್ಟಿ ಮತ್ತು ಸಾಮಾಜಿಕ ಸಾಮರಸ್ಯ, ಶಾಂತಿ ಕಾಪಾಡುವ ಹಿನ್ನೆಲೆಯಲ್ಲಿ ಮಾಂಸಕ್ಕಾಗಿ ಗೋ ಹತ್ಯೆ ಮತ್ತು ದನಗಳ ಹತ್ಯೆಗೆ ಮುಂದಾಗಬಾರದು ಎಂದು ಉಲೇಮಾಗಳು ಕಿವಿಮಾತು ಹೇಳಿದ್ದಾರೆ. ದನದ ಮಾಂಸದ ಬದಲಾಗಿ ಶರೀಯಾದಲ್ಲಿ ಉಲ್ಲೇಖಿಸಿರುವಂತೆ ಮೇಕೆ, ಕುರಿಗಳು ಸೇರಿದಂತೆ ಇನ್ನಿತರ ಪ್ರಾಣಿಗಳ ಮಾಂಸವನ್ನು ಸೇವಿಸಲು ಅಭ್ಯಂತರ ಇಲ್ಲ ಎಂದು ಹೇಳಿದ್ದಾರೆ. ದಕ್ಷಿಣ ಭಾರತದ ಮುಸ್ಲಿಂ ಧರ್ಮಗುರುಗಳು, ಮುಖಂಡರು, ಪಂಡಿತರು ಈ ವಾದವನ್ನು ಬೆಂಬಲಿಸಿದ್ದಾರೆ. ಜಾಲತಾಣ, ಅಂತರ್ಜಾಲ, ಕರಪತ್ರದ ಮೂಲಕ ದನದ ಮಾಂಸ ತ್ಯಜಿಸಲು ಕೋರಿದ್ದಾರೆ.

ಸಂಪಾದಕ–ಪ್ರಕಾಶಕ : ಕಾ.ಶ್ರೀ. ನಾಗರಾಜ, # 74, ರಂಗರಾವ್ ರಸ್ತೆ, ಬೆಂಗಳೂರು–04.
ಮುದ್ರಕರು : ರಾಷ್ಟ್ರೋತ್ಥಾನ ಮುದ್ರಣಾಲಯ, ಬೆಂಗಳೂರು–19.
ಚಂದಾ ವಿವರ ಮತ್ತು ವಿಳಾಸ ಬದಲಾವಣೆಗಾಗಿ : 97391 83021
ಸಂಪಾದಕೀಯ : 97312 64009